ಸಂಪುಟ : 8 ಸಂಚಿಕೆ : 261 ಪುಟ : 4 ಬೆಲೆ : 3.00 ಶನಿವಾರ ನವ್ಹಂಬರ್ 25, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 261 Pages : 4 Price : 3.00 Saturday November 25, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಕೊಪ್ಪಳ ಗವಿಶ್ರೀಗಳ ಆಧ್ಯಾತ್ಮಿಕ ಪ್ರವಚನ ಉದ್ಘಾಟನೆ

## ವಚನಾನುಭವ ತಿಳಿಸುವುದೇ ಪ್ರವಚನ



**■ ವಿಜಯಸಾಕ್ಷಿ ಸುದ್ದಿ, ಗದಗ**

ಬಸವಾದಿ ಶಿವಶರಣರು ಪರಿಶುದ್ಧ ಹೃದಯದಿಂದ ಬರೆದ ನುಡಿಗಳೆ ವಚನಗಳು. ಅಂಥ ವಚನಗಳ ಅನುಭಾವವನ್ನು ಕ್ರಮಬದ್ಧವಾಗಿ ತಿಳಿಸಿಕೊಡುವುದೇ ಪ್ರವಚನ ಎಂದು ಎಂದು ಜ.ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಶುಕ್ರವಾರ ನಗರದ ವಿದ್ಯಾದಾನ ಸಮಿತಿ ಮೈದಾನದಲ್ಲಿ ನಡೆದ ಆಧ್ಯಾತ್ಮಿಕ ಪ್ರವಚನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರವಚನ ಆಲಿಕೆಯಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ. ಅನುಭಾವದ ನುಡಿಗಳು ನಮ್ಮ ಇರುವಿಕೆಯನ್ನು ತಿಳಿಸಿಕೊಡುವ ಕೆಲಸ ಮಾಡುತ್ತದೆ ಎಂದರು.

ಮನುಷ್ಯನಿಗೆ ನಾನು, ನನ್ನದು ಎನ್ನುವ ಭಾವನೆ ಇರುವವರೆಗೂ ಸುಖ ಶಾಂತಿ ಸಿಗಲು ಸಾಧ್ಯವಿಲ್ಲ. ನಾನು ನನ್ನದು ಎನ್ನುವುದು ಅಜ್ಞಾನದ ಸಂಕೇತ. ಎಲ್ಲವೂ ದೇವನದು ಎನ್ನುವ ಸತ್ಯ ಅರಿತುಕೊಂಡರೆ ಮಾತ್ರ ಜ್ಞಾನದ ಜ್ಯೋತಿ ಬೆಳಗಲು ಸಾಧ್ಯ ಎಂದರು.

> ಕೂಡಿಟ್ಟ ಹಣ, ಸಂಪತ್ತಿಗಿಂತ ಭಗವಂತನ ಸ್ಮರಣೆ, ಸತ್ಸಂಗ ಮಾತ್ರ ಮನುಷ್ಯನನ್ನಜ ಸಂಕಷ್ಟ ದೂರ ಮಾಡಲು ಸಾಧ್ಯ.
>
> **– ಹೊಸಳ್ಳಿಯ ಬೂದೀಶ್ವರ ಸ್ವಾಮೀಜಿ.**

ಅಭಿನವ ಗವಿಶ್ರೀಗಳ ಪ್ರವಚನಗಳ ಮೂಲಕ ಜ್ಞಾನದ ಜ್ಯೋತಿ ಬೆಳಗುವ ಕಾರ್ಯ ಮಾಡುತ್ತಿದ್ದಾರೆ. ಜ್ಞಾನದ ಜ್ಯೋತಿ ಬೆಳಗಿದರೆ ಮಾತ್ರ ಶಾಶ್ವತ ಪರಮಾನಂದ ಅನುಭವಿಸಲು ಸಾಧ್ಯ. ಅಂಥ ಸದಾವಕಾಶ ಗದಗ ಬೆಟಗೇರಿ ಜನರಿಗೆ ಪ್ರತ್ಯಕ್ಷವಾಗಿ ಕಂಡು, ಕೇಳುವ ಸದಾವಕಾಶ ದೊರೆತಿದೆ ಎಂದರು.

ಪ್ರವಚನ ಸಮಾರಂಭದಲ್ಲಿ ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಶಿವಾನಂದ ಮಠದ ಶಿವಾನಂದ ಮಹಾಸ್ವಾಮೀಜಿ, ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ, ಹೊಸಳ್ಳಿಯ ಬೂದೀಶ್ವರ ಸ್ವಾಮೀಜಿ, ಬಳಗಾನೂರಿನ ಶಿವಶಾಂತವೀರ ಸ್ವಾಮೀಜಿ, ಆಧ್ಯಾತ್ಮ ವಿದ್ಯಾಶ್ರಮದ ನೀಲಮ್ಮತಾಯಿ ಅಸುಂಡಿ, ಬೆಟಗೇರಿಯ ನೀಲಕಂಠೇಶ್ವರ ಮಠದ ನೀಲಕಂಠ ಪಟ್ಟದಾರ್ಯ ಸ್ವಾಮೀಜಿ, ಲಡ್ಡು ಮುತ್ಯ, ಕಾನೂನು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ, ಮಾಜಿ ಸಚಿವ ಎಸ್.ಎಸ್. ಪಾಟೀಲ, ಮಾಜಿ ಶಾಸಕ ಡಿ.ಆರ್. ಪಾಟೀಲ, ಎ.ಎಂ. ಹಿಂಡಸಗೇರಿ, ವಾಸಣ್ಣ ಕುರುಡಗಿ, ಸಿದ್ದು ಪಾಟೀಲ ಸೇರಿದಂತೆ ಇತರರು ಭಾಗವಹಿಸಿದ್ದರು.

### ಹುಲ್ಲೂರಿನ ಅಮೋಘ ಸಿದ್ದೇಶ್ವರ ಸಂಸ್ಥಾನಮಠದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೆ.ಎಸ್. ಈಶ್ವರಪ್ಪ

## ಭಾರತೀಯ ಸಂಪ್ರದಾಯ ಶ್ರೇಷ್ಠತೆಯನ್ನು ಹೊಂದಿದೆ



> ಸಮಿತಿಯವರು ಗ್ರಾಮದಲ್ಲಿ ಶಿಕ್ಷಣ ಸಂಸ್ಥೆ ಪ್ರಾರಂಭಿಸುವ ಕುರಿತು ಮಾಡಿದ ಪ್ರಸ್ತಾವಕ್ಕೆ ಸಹಮತ ವ್ಯಕ್ತಪಡಿಸಿದ ಕೆ.ಎಸ್. ಈಶ್ವರಪ್ಪ, ಸಿದ್ದೇಶ್ವರನ ಭಕ್ತರು ಮುಂದಾದರೆ ಯಾವುದೂ ಅಸಾಧ್ಯವಲ್ಲ, ಶಾಲೆ ಕಟ್ಟುವ ವಿಚಾರಕ್ಕೆ ಸಮಿತಿಯವರು ಹಣಕಾಸು ತೊಡಗಿಸಲು ಮುಂದಾಗಿ. ಅದಕ್ಕೆ ನಾನು 10 ಲಕ್ಷ ರೂಗಳನ್ನು ಕೊಡುತ್ತೇನೆ ಎಂದು ವಾಗ್ದಾನ ಮಾಡಿದರಲ್ಲದೆ, ಇಂತಹ ವಿಶಿಷ್ಟ ಕಾರ್ಯಕ್ರಮಕ್ಕೆ ನನ್ನನ್ನು ಕರೆಯಿಸಿ ಗೌರವಿಸಿ, ದೇವಸ್ಥಾನವನ್ನು ಲೋಕಾರ್ಪಣೆಗೊಳಿಸುವ ಕಾರ್ಯ ಮಾಡಿರುವದು ನನ್ನ ಭಾಗ್ಯವಾಗಿದೆ ಎಂದರು.

> ಡಿಕೆಶಿ ವಿರುದ್ಧದ ಸಿಬಿಐ ಕೇಸ್ ಹಿಂಪಡೆಯುವ ಕ್ಯಾಬಿನೆಟ್ ನಿರ್ಧಾರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಕೆ.ಎಸ್. ಈಶ್ವರಪ್ಪ, ಸಿಬಿಐ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಮುಂದಾಗಿದೆ. ಯಾವ ಕಾರಣಕ್ಕೂ ಕೇಸ್ ಹಿಂಪಡೆಯಲು ಅವಕಾಶ ನೀಡುವುದಿಲ್ಲ. ಸರ್ಕಾರಕ್ಕೆ ಈ ಅಧಿಕಾರ ಇಲ್ಲ. ದೇಶದ ಇತಿಹಾಸದಲ್ಲಿಯೇ ಸಿಬಿಐ ಕೇಸ್ ಹಿಂಪಡೆದಿದ್ದಿಲ್ಲ. ಈಗಾಗಲೇ ಶೇ. 80ರಷ್ಟು ಮುಗಿದಿರುವ ಪ್ರಕರಣವನ್ನು ತಡೆಯಬೇಕೆಂದು ಅನೇಕರು ಕೋರ್ಟ್‌ಗೆ ಹೋಗಿ ನಿರಾಸೆಯಿಂದ ಬಂದರು. ಈ ಸಂದರ್ಭದಲ್ಲಿ ಜನರಿಂದ ಆಯ್ಕೆಯಾದ ಸರ್ಕಾರ ಅಕ್ರಮವಾಗಿ ನಿರ್ಣಯ ತೆಗೆದುಕೊಂಡಿದೆ. ಸರ್ಕಾರ ಬೀಳುತ್ತೆ ಅನ್ನುವುದಕ್ಕೆ ಇದು ಮೊದಲ ಹೆಜ್ಜೆ.
>
> ಡಿಕೆಶಿ, ಸಿದ್ದರಾಮಯ್ಯ, ಎಚ್.ಕೆ. ಪಾಟೀಲರು ಕಾನೂನು ತಜ್ಞರು. ಸಿಬಿಐ ತನಿಖೆ ನಡೆಸುತ್ತಿರುವ ಪ್ರಕರಣವನ್ನು ಹಿಂಪಡೆದ ಇತಿಹಾಸವಿದೆಯಾ ಅವರೇ ಹೇಳಲಿ ಎಂದು ಹರಿಹಾಯ್ದರು.

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನಾಡಿನ ಸಾಂಸ್ಕೃತಿಕ, ಪಾರಂಪರಿಕ ಇತಿಹಾಸದಲ್ಲಿ ಮಠ–ಮಂದಿರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮನುಷ್ಯನಿಗೆ ಶಾಂತಿ, ನೆಮ್ಮದಿ ದೊರೆಯಲು ದೇವಸ್ಥಾನಗಳು ಇರಬೇಕು. ಪ್ರಪಂಚದಲ್ಲಿ ದೇವರನ್ನು ನಂಬಿ ಪೂಜೆ ಮಾಡುವ ಏಕೈಕ ದೇಶ ನಮ್ಮ ಭಾರತ. ಧರ್ಮ ಮತ್ತು ದೇವರನ್ನು ನಂಬುವವರು ಭಾರತೀಯರು ಮಾತ್ರ. ಅದಕ್ಕಾಗಿಯೇ ಜಗತ್ತಿನಲ್ಲಿ ಶ್ರೇಷ್ಠ ಸಂಸ್ಕೃತಿ, ಸಂಪ್ರದಾಯವನ್ನು ಹೊಂದಿದ ದೇಶ ನಮ್ಮದಾಗಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ಅವರು ಶುಕ್ರವಾರ ತಾಲೂಕಿನ ಹುಲ್ಲೂರು ಗ್ರಾಮದ ಅಮೋಘ ಸಿದ್ದೇಶ್ವರ ಸಂಸ್ಥಾನಮಠದ ಲೋಕಾರ್ಪಣೆ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

▸▸3 ನೇ ಪುಟಕ್ಕೆ

### ಜಿಲ್ಲೆಯ ಗ್ರಾ.ಪಂ ಅಧ್ಯಕ್ಷ, ಉಪಾಧ್ಯಕ್ಷ, ಪಿಡಿಓ ಮತ್ತು ಕಾರ್ಯದರ್ಶಿಗಳ ಸಭೆಯಲ್ಲಿ ಸಚಿವ ಸಂತೋಷ್ ಲಾಡ್

## ಬರಗಾಲ ನಿರ್ವಹಣೆಗೆ ಸಮರ್ಪಕ ಮುಂಜಾಗ್ರತಾ ಕ್ರಮ



**■ ವಿಜಯಸಾಕ್ಷಿ ಸುದ್ದಿ, ಧಾರವಾಡ**

ಜಿಲ್ಲೆಯ ಬರಗಾಲ ಪೀಡಿತ ಪ್ರದೇಶಗಳಲ್ಲಿ ಪ್ರಸ್ತುತ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳ ಕೊರತೆ ಕಾಣದಿದ್ದರೂ ಮುಂಬರುವ ದಿನಗಳಲ್ಲಿ ಸಮರ್ಪಕವಾಗಿ ಬರ ನಿರ್ವಹಣೆ ಮಾಡಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗ್ರಾಮಗಳಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಹಾಗೂ ಕೂಲಿ ಕಾರ್ಮಿಕರ ಕೈಗೆ ಕೆಲಸ ನೀಡುವ ಉದ್ಯೋಗಕ್ಕೆ ಆದ್ಯತೆ ನೀಡಲಾಗಿದೆ ಎಂದು ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಶುಕ್ರವಾರ ಕೃಷಿ ವಿಶ್ವವಿದ್ಯಾಲಯದ ರೈತ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಧಾರವಾಡ ಜಿಲ್ಲೆಯ ಬರಗಾಲ ಪೀಡಿತ ಪ್ರದೇಶಗಳ ವಿವಿಧ ಅಭಿವೃದ್ಧಿ ಯೋಜನೆಗಳನ್ನು ತುರ್ತಾಗಿ ಅನುಷ್ಠಾನಗೊಳಿಸುವ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲ ಗ್ರಾ.ಪಂ ಅಧ್ಯಕ್ಷ, ಉಪಾಧ್ಯಕ್ಷ, ಪಿಡಿಓ ಮತ್ತು ಕಾರ್ಯದರ್ಶಿಗಳ ಸಭೆ ಜರುಗಿಸಿ ಮಾತನಾಡಿದರು.

ಬರಗಾಲದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ನರೇಗಾ ಯೋಜನೆಯಡಿ ನೋಂದಾಯಿತ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡಲು ಮಾನವ ದಿನಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

▸▸3 ನೇ ಪುಟಕ್ಕೆ

## ಸಾರ್ವಜನಿಕರು ಜಾಗೃತರಾಗಿ: ಎಸ್‌ಪಿ ನೇಮಗೌಡ



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಭವಿಷ್ಯದ ದಿನಗಳಲ್ಲಿ ಸೈಬರ್‌ಕ್ರೈಂ, ಟ್ರಾಫಿಕ್ ಸಮಸ್ಯೆಗಳು ಉಲ್ಬಣಗೊಳ್ಳಲಿದ್ದು, ಇವುಗಳ ನಿಯಂತ್ರಣಕ್ಕಾಗಿ ಜನರು ಸ್ವಯಂ ಜಾಗೃತಗೊಳ್ಳಬೇಕು ಮತ್ತು ಪೊಲೀಸರ ಕಾರ್ಯಕ್ಕೆ ಸಹಕಾರ ನೀಡುವುದರಿಂದ ನಿಯಂತ್ರಣ ಸಾಧ್ಯವಾಗಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಹೇಳಿದರು.

ಅವರು ಪರಿಶೀಲನೆಗಾಗಿ ಪಟ್ಟಣದ ಪೊಲೀಸ್ ಠಾಣೆಗೆ ಆಗಮಿಸಿದ್ದ ಸಂದರ್ಭದಲ್ಲಿ ಠಾಣೆಯ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನೆರವೇರಿಸಿ ಮಾತನಾಡಿ, ಗದಗ ಜಿಲ್ಲೆಯಲ್ಲಿ ಲಕ್ಷ್ಮೇಶ್ವರ ಪಟ್ಟಣ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಟ್ರಾಫಿಕ್ ಸಮಸ್ಯೆ ಹೆಚ್ಚುತ್ತಿದೆ. ಪಟ್ಟಣದ ಮುಖ್ಯ ಬಜಾರ್ ರಸ್ತೆಯ ಕಾಮಗಾರಿ ಪೂರ್ಣಗೊಂಡ ಬಳಿಕ ಟ್ರಾಫಿಕ್ ನಿಯಂತ್ರಣದ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವದು. ಅದಕ್ಕೆ ತಕ್ಕಂತೆ ಪೊಲೀಸ್ ವ್ಯವಸ್ಥೆಯನ್ನು ಸಹ ಹೆಚ್ಚಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದರು.

ಪೇಟೆ ರಸ್ತೆಯಲ್ಲಿ ಜನಜಂಗುಳಿ ಹೆಚ್ಚುತ್ತಿರುವ ಕುರಿತು ದೂರುಗಳಿದ್ದು, ರಸ್ತೆ ಕಾಮಗಾರಿಯನ್ನು ಬೇಗ ಮುಗಿಸಲು ಗುತ್ತಿಗೆದಾರರಿಗೆ ಆದೇಶ ಮಾಡುವಂತೆ ಮುಖ್ಯಾಧಿಕಾರಿಗಳಿಗೆ ತಿಳಿಸಲಾಗುವದು. ರಸ್ತೆ ಕಾಮಗಾರಿ ಮುಗಿದ ತಕ್ಷಣ ವಾಹನ ನಿಲುಗಡೆ, ಒನ್‌ವೇ ಸೇರಿದಂತೆ ದಟ್ಟಣೆ ನಿಯಂತ್ರಣಕ್ಕೆ ಪುರಸಭೆ ಸಹಕಾರದೊಂದಿಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವದು. ಇದಕ್ಕೆ ಪುರಸಭೆಯವರ ಸಹಾಯ–ಸಹಕಾರ ಅವಶ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಿಪಿಐ ನಾಗರಾಜ ಮಾಡಳ್ಳಿ, ಪಿಎಸ್‌ಐಗಳಾದ ಯುಸೂಫ್ ಜಮೂಲಾ, ವಿ.ಜಿ. ಪವಾರ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು.

## ವರದಕ್ಷಿಣೆ ಕಿರುಕುಳ ನೀಡಿ ಪತ್ನಿಯ ಖಾಸಗಿ ಅಂಗಾಂಗಕ್ಕೆ ಆ್ಯಸಿಡ್ ಎರಚಿದ ಪತಿ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಪತಿಯೊಬ್ಬ ತನ್ನ ಪತ್ನಿಯ ಖಾಸಗಿ ಅಂಗಗಳ ಮೇಲೆ ಟಾಯ್ಲೆಟ್ ಕ್ಲೀನಿಂಗ್ ಆ್ಯಸಿಡ್ ಎರಚಿರುವ ಆಘಾತಕಾರಿ ಘಟನೆ ನಡೆದಿದೆ.

ಆರೋಪಿಯು ಇದೇ ವರ್ಷ ಮೇ 19 ರಂದು 23 ವರ್ಷದ ಸಂತ್ರಸ್ತೆಯನ್ನು ವಿವಾಹವಾಗಿದ್ದ. ಆರೋಪಿಯು ಮದ್ಯವ್ಯಸನಿಯಾಗಿದ್ದು, ಅಪರೂಪಕ್ಕೆ ಕೆಲಸಕ್ಕೆ ಹೋಗುತ್ತಿದ್ದ ಎನ್ನಲಾಗಿದೆ. ಬದಲಾಗಿ ಪತ್ನಿಯಿಂದ


# ಪ್ರಥಮ ಪುಣ್ಯಸ್ಮರಣೆ



ಜನನ : 15-04-1962
ಮರಣ : 25-11-2022

## ದಿ. ಶ್ರೀ ಶ್ರೀಶೈಲಪ್ಪ ವಿ. ಬಿದರೂರ

ಮಾಜಿ ಶಾಸಕರು ರೋಣ ಮತ್ತು ಗದಗ ವಿಧಾನಸಭಾ ಕ್ಷೇತ್ರ
ಸಾ|| ಸೂಡಿ ತಾ : ಗಜೇಂದ್ರಗಡ ಜಿ : ಗದಗ
ಇವರು ದಿ. 25-11-2022 ರಂದು ವೈಕುಂಠವಾಸಿಗಳಾದರು.
ಇವರ ಪ್ರಥಮ ಪುಣ್ಯಸ್ಮರಣೆಯು ದಿನಾಂಕ 25-11-2023 ಶನಿವಾರ ಮುಂಜಾನೆ 11-30 ಘಂಟೆಗೆ ಗಜೇಂದ್ರಗಡ ತಾಲೂಕು ಸೂಡಿ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರಾದ,
ಬಿದರೂರ ಪರಿವಾರ ಹಾಗೂ ಬಂಧುಗಳು
ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ
* ಬಿದರೂರ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದ ಆ್ಯಂಡ್ ಹಾಸ್ಪಿಟಲ್
* ಗದಗ ಪಬ್ಲಿಕ್ ಸ್ಕೂಲ್ * ಅಂದಾನಪ್ಪ ದೊಡ್ಡಮೇಟಿ ಐ.ಟಿ.ಐ. ಕಾಲೇಜ
* ಜೆ.ಸಿ.ಎಸ್.ಎಸ್. ಹೈಸ್ಕೂಲ್

## ಸಾಕ್ಷಿ ಸುಭಾಷಿತ

ತನ್ನ ಉದ್ಯೋಗವನ್ನು ಜೀವನೋಪಾಯದ ಮಾರ್ಗವನ್ನಾಗಿ ಮಾಡಿಕೊಳ್ಳದೆ ಅದನ್ನು ತನ್ನ ಜೀವನದ ಮಾರ್ಗವನ್ನಾಗಿ ಮಾಡಿಕೊಳ್ಳುವಂಥವನೇ ಶ್ರೇಷ್ಠ ವ್ಯಕ್ತಿ.

–ಮೇರಿ ಬೇಕ್ಸ್

## ಸಂಪಾದಕೀಯ

# ರಾಜಕೀಯ ನಾಟಕಗಳಿಗೆ ಕೊನೆ ಎಂದು?

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ರಾಜ್ಯ ಸರ್ಕಾರ ಹಿಂಪಡೆಯಲು ನಿರ್ಧರಿಸಿರುವುದು ಭಾರಿ ಕೋಲಾಹಲಕ್ಕೆ ಕಾರಣವಾಗಿದೆ.

ಸಿಬಿಐ ಇನ್ನೇನು ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸುವ ಸಮಯದಲ್ಲಿ ಸರಕಾರ ಇಂಥದ್ದೊಂದು ನಿರ್ಣಯ ಕೈಗೊಂಡಿರುವುದು ಅನುಮಾನಕ್ಕೆ ಮಾತ್ರವಲ್ಲದೆ, ರಾಜಕೀಯ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿದೆ.

2019 ರಲ್ಲಿ ಅಕ್ರಮ ಗಳಿಕೆ ಸಂಬಂಧವಾಗಿ ಅಂದಿನ ಬಿಜೆಪಿ ಸರ್ಕಾರ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಆದೇಶ ನೀಡಿತ್ತು. ಆದರೆ ಅಂದಿನ ಸರ್ಕಾರ ನಿಯಮಾವಳಿಗಳನ್ನ ಮೀರಿ ತನಿಖೆಗೆ ಆದೇಶ ನೀಡಿತ್ತು ಎನ್ನುವ ಕಾರಣವನ್ನು ಈಗಿನ ಕಾಂಗ್ರೆಸ್ ಸರ್ಕಾರ ನೀಡಿದೆ. ಅದರ ಆಧಾರದ ಮೇಲೆ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆಯುವ ನಿರ್ಧಾರಕ್ಕೆ ಬಂದಿದೆ.

ಶಾಸಕರ ವಿರುದ್ಧ ತನಿಖೆ ಕೈಗೊಳ್ಳುವ ಮುನ್ನ ವಿಧಾನಸಭಾ ಅಧ್ಯಕ್ಷರ ಅನುಮತಿ ಪಡೆಯಬೇಕು ಎನ್ನುವ ನಿಯಮವಿದೆ. ಆ ನಿಯಮ ಡಿಕೆ ಶಿವಕುಮಾರ್ ವಿಷಯದಲ್ಲಿ ಪಾಲನೆಯಾಗಿಲ್ಲ ಎಂದು ಕಾಂಗ್ರೆಸ್ ಹೇಳಿಕೊಳ್ಳುತ್ತಿದೆ. ಹಾಗಿದ್ದರೆ 2019ರಲ್ಲಿ ಕೇಸ್ ದಾಖಲಾದ ಸಂದರ್ಭದಲ್ಲಿ ಕಾಂಗ್ರೆಸ್ ಈ ವಿಷಯವನ್ನು ಮುಂದಿಟ್ಟುಕೊಂಡು ಯಾಕೆ ಸರ್ಕಾರವನ್ನ ಪ್ರಶ್ನಿಸಲಿಲ್ಲ? ಹೈಕೋರ್ಟ್, ಸುಪ್ರೀಂ ಕೋರ್ಟ್ ನಲ್ಲಿ ಈ ವಿಷಯವನ್ನ ಪ್ರಸ್ತಾಪಿಸಲಿಲ್ಲ ಎನ್ನುವುದು ಯಕ್ಷಪ್ರಶ್ನೆಯಾಗಿದೆ.

ಇನ್ನು ಬಿಜೆಪಿ ಸರ್ಕಾರ, ಅಕ್ರಮ ಆಸ್ತಿ ಗಳಿಕೆಯ ಪ್ರಕರಣವನ್ನು ಸಿಬಿಐಗೆ ವಹಿಸುವ ಮುನ್ನ ಕಾನೂನು ರೀತಿಯ ಎಲ್ಲ ಕ್ರಮಗಳನ್ನ ಏಕೆ ತೆಗೆದುಕೊಂಡಿಲ್ಲ ಎನ್ನುವುದು ಕೂಡ ಅನುಮಾನಕ್ಕೆ ಕಾರಣವಾಗಿದೆ. ಒಂದು ವೇಳೆ ಬಿಜೆಪಿ ಸರ್ಕಾರ ತನ್ನ ಅಧಿಕಾರಾವಧಿ ಸಂದರ್ಭದಲ್ಲಿ ವಿಧಾನಸಭಾ ಅಧ್ಯಕ್ಷರ ಅನುಮತಿ ಪಡೆದಿದ್ದರೆ ಆ ದಾಖಲೆಗಳನ್ನು ಪ್ರದರ್ಶಿಸಬೇಕು.

ಕೇಸ್ ದಾಖಲಾದ ಸಂದರ್ಭದಲ್ಲಿ ಕಾಂಗ್ರೆಸ್ ಮೌನವಾಗಿದ್ದು, ಈಗ ಅಧಿಕಾರಕ್ಕೆ ಬಂದ ನಂತರ ಅದು ಕೊನೆ ಘಳಿಗೆಯಲ್ಲಿ ಅನುಮತಿಯನ್ನು ನಿರಾಕರಣೆ ಮಾಡಿರುವುದು ಒಂದು ನಾಟಕವೇ. ಶಾಸಕರೊಬ್ಬರ ವಿರುದ್ಧ ವಿಚಾರಣೆಗೆ ಅನುಮತಿ ನೀಡಲು ನಿಯಮ ಪಾಲನೆ ಮಾಡದಿರುವುದು ಬಿಜೆಪಿಯ ನಾಟಕವೇ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳು ಇಂತಹ ನಾಟಕಗಳ ಮೂಲಕ ಜನರ ದಿಕ್ಕು ತಪ್ಪಿಸುವುದು ಸರ್ವೇ ಸಾಮಾನ್ಯ. ಅಂತಹ ನಾಟಕಗಳಲ್ಲಿ ಇದು ಸಹ ಒಂದು. ಬಲಿಷ್ಠ ಪ್ರಜಾಪ್ರಭುತ್ವಕ್ಕಾಗಿ ಇಂತಹ ನಾಟಕಗಳಿಗೆ ಜನ ಕೊನೆ ಹಾಡಬೇಕಿದೆ.

# ನೂರಕ್ಕೆ ನೂರರಷ್ಟು ಡಿಕೆ ಶಿವಕುಮಾರ ಜೈಲಿಗೆ ಹೋಗುತ್ತಾರೆ : ಈಶ್ವರಪ್ಪ

■ವಿಜಯಸಾಕ್ಷಿ ಸುದ್ದಿ, ಶಿವಮೊಗ್ಗ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದುಳಿದವರಿಗೆ ದಲಿತರಿಗೆ ದ್ರೋಹ ಮಾಡು ತ್ತಿದ್ದಾರೆ. ಡಿಸಿಎಂ ಡಿಕೆ ಶಿವಕುಮಾರ್ ಅವರು ನ್ಯಾಯಾಲಯಕ್ಕೆ ಅಲೆಯುತ್ತಿದ್ದಾರೆ. ಸಚಿವ ಸಂಪುಟದ ಪಾವಿತ್ರ್ಯತೆ ಹಾಳು ಮಾಡುತ್ತಿದ್ದಾರೆ. ನೂರಕ್ಕೆ ನೂರರಷ್ಟು ಡಿಕೆ ಶಿವಕುಮಾರ್ ವಿರುದ್ಧವಾಗಿ ತೀರ್ಪು ಬರಲಿದೆ.

ನೂರಕ್ಕೆ ನೂರರಷ್ಟು ಡಿಕೆ ಶಿವಕುಮಾರ್ ಜೈಲಿಗೆ ಹೋಗುತ್ತಾರೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಇದರಿಂದ ತಪ್ಪಿಸಿಕೊಳ್ಳಲು ಈ



ರೀತಿ ಮಾಡುತ್ತಿದ್ದಾರೆ.

ಸಿದ್ದರಾಮಯ್ಯ ರಾಜಕೀಯ ಜೀವನದಲ್ಲಿ ಇದೊಂದು ಕಪ್ಪು ಚುಕ್ಕೆ. ಡಿಕೆ ಶಿವಕುಮಾರ್ ಸಲುವಾಗಿ ಸಿದ್ದರಾಮಯ್ಯ ಕಪ್ಪು ಚುಕ್ಕೆ ಅಂಟಿಸಿಕೊಂಡರು ಎಂದು ಮಾಜಿ ಸಚಿವ ಕೆಎಸ್ ಈಶ್ವರಪ್ಪ ಹೇಳಿದರು.

## ಬಂಧುಗಳು, ಅಭಿಮಾನಿಗಳ ಮನದಲ್ಲಿ ಮಾಸದ ನೆನಪಾಗಿರುವ ಶ್ರೀಶೈಲಪ್ಪ ಬಿದರೂರ

# ಸಜ್ಜನ ರಾಜಕೀಯದ ಸಾವಕಾರ, ಸ್ನೇಹಜೀವಿ-ಬಿದರೂರ









ನಾನು ತುಂಬಾ ಸೀಮಿತ ಖಾಸಗಿ ಬಳಗ ಹೊಂದಿರುವ ಸಂಕೋಚದ ವ್ಯಕ್ತಿ. ಆದರೆ ಊಟ, ನೋಟ, ಮಾತುಕತೆಗಳಲ್ಲಿ ಸಮಾನ ಮನಸ್ಕರಾಗಿದ್ದರಿಂದ ಅವರೊಂದಿಗೆ, ಅವರಿಗೆ ಅಧಿಕಾರ ಇಲ್ಲದ ಸಂದರ್ಭದಲ್ಲಿಯೂ ಸುದೀರ್ಘ ಪ್ರವಾಸ ಸಾಧ್ಯವಾಯಿತು. ಬೇಗ ಸಿಟ್ಟಾಗಿ ಅಷ್ಟೇ ಬೇಗ ಶಾಂತವಾಗುವ ಮೂಡಿ ಸ್ವಭಾವ. ಆದರೆ ಒಂದಿಷ್ಟರೂ ದ್ವೇಷ, ಅಸೂಯೆ, ಕಲ್ಮಶ ಇರದ ಉದಾರ ನಿಲುವು. ಹಣ, ಆಸ್ತಿ, ಉಡುಗೆ ಯಾವುದನ್ನು ವಿನಾಕಾರಣ ಬಯಸುತ್ತಿರಲಿಲ್ಲ. ತಮ್ಮ ರಾಜಕೀಯ ಗುರು ಪರಿವಾರದ 'ದೊಡ್ಡಮೇಟಿ' ಅವರ ಜನ್ಮಶತಮಾನೋತ್ಸವವನ್ನು ಅದ್ದೂರಿಯಾಗಿ ಆಚರಿಸಿ, ಅವರ ಗೌರವ ಹೆಚ್ಚಿಸಿದರು.

ಇಂದಿನ ರಾಜಕೀಯ ವ್ಯಕ್ತಿಗಳ ಜೊತೆಗೆ ಸೈದ್ಧಾಂತಿಕ ಚರ್ಚೆ ಅಸಾಧ್ಯ ಎನಿಸಿದ ಹೊತ್ತಿನಲ್ಲಿ, ನಾಡು ಕಂಡ ಚಿಂತನಾಶೀಲ, ಸಜ್ಜನ ರಾಜಕೀಯ ನಾಯಕ, ರೋಣ ಹಾಗೂ ಗದಗ ಕ್ಷೇತ್ರಗಳ ಶಾಸಕರಾಗಿದ್ದ ಶ್ರೀಶೈಲಪ್ಪ ಬಿದರೂರ ಅವರ ಅನುಪಸ್ಥಿತಿ ಶೂನ್ಯ ಭಾವ ಉಂಟು ಮಾಡಿದೆ. ಇವರ ಕುಟುಂಬದ ಔದಾರ್ಯವನ್ನು ಮೆಚ್ಚಿ ಜನ ನೀಡಿದ 'ಸಾವಕಾರ' ಪದವಿಗೆ ಅರ್ಹ ವ್ಯಕ್ತಿತ್ವ ಬಿದರೂರ ಅವರದು.

ಕಳೆದ ಮೂರು ದಶಕಗಳ ರಾಜಕೀಯ ಒಡನಾಟದಲ್ಲಿ ಜನತಾ ಪರಿವಾರದ ಮೂಲಕ ಹತ್ತಿರವಾದವರು ಶ್ರೀಶೈಲಪ್ಪ ಬಿದರೂರ ಅವರು. ಒಂದರ್ಥದಲ್ಲಿ ಅವರು ಸುದೈವಿ ರಾಜಕಾರಣಿ. ಅವರ ತಂದೆ ವಿರೂಪಾಕ್ಷಪ್ಪ ಬಿದರೂರ ಕೂಡ ಸಕ್ರಿಯ ರಾಜಕೀಯದಲ್ಲಿ ಇದ್ದವರು. ರೋಣ ಕ್ಷೇತ್ರ ಅನೇಕ ಕಾರಣಗಳಿಂದ ದೇಶವಾಸಿಯಾಗಿದೆ. ಗಾಂಧಿವಾದಿ ಅಂದಾನೆಪ್ಪ ದೊಡ್ಡಮೇಟಿ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರ ಎಂಬ ಹೆಗ್ಗಳಿಕೆ ಬೇರೆ! ಗಾಂಧೀಜಿ, ನೆಹರು ಅವರು ಈ ಪ್ರದೇಶಕ್ಕೆ ಬಂದು ಹೋದ ಕಾರಣದಿಂದ ತನ್ನ ಐತಿಹಾಸಿಕ ಛಾಪನ್ನು ಈ ಕ್ಷೇತ್ರ ಹೆಚ್ಚಿಸಿಕೊಂಡಿದೆ.

ಅದೇ ಕ್ಷೇತ್ರದಿಂದ ಶಾಸಕರಾಗಿ, ಸರಳತೆ ಮತ್ತು ಪ್ರಾಮಾಣಿಕತೆಯ ಪ್ರತಿರೂಪವಾಗಿದ್ದ ಜ್ಞಾನದೇವ ದೊಡ್ಡಮೇಟಿ ಅವರ ಗರಡಿಯಲ್ಲಿ ರಾಜಕೀಯ ಆರಂಭ ಮಾಡಿದ ಬಿದರೂರ, ಮೊದಲು ಗ್ರಾಮೀಣ ರಾಜಕೀಯ ಆಯ್ದುಕೊಂಡರು. ಮಂಡಲ ಪಂಚಾಯತ ಪ್ರಧಾನರಾಗುವ ಮೂಲಕ ಅತ್ಯಂತ ಕಿರಿಯ ವಯಸ್ಸಿನಲ್ಲಿ ಅಧಿಕಾರ ತಮ್ಮದಾಗಿಸಿಕೊಂಡರು. ಪ್ರೀತಿ, ವಿಶ್ವಾಸ ಹಾಗೂ ಆತ್ಮೀಯತೆಯ ಪ್ರತಿರೂಪವಾಗಿದ್ದರೂ, ಯಾರೇ ಆಗಲಿ ಮೊದಲ ಬಾರಿ ಭೇಟಿ ಆದಾಗ ಇವರ ವ್ಯಕ್ತಿತ್ವದ ವಿಶೇಷತೆ ಅರ್ಥವಾಗುತ್ತಿದ್ದಿಲ್ಲ, ತುಂಬಾ ಮೂಡಿ ಮನುಷ್ಯ ಎನಿಸಿಬಿಡುತ್ತಿದ್ದರು.

ಕಲಬುರ್ಗಿ ಶರಣಬಸವೇಶ್ವರ ಇಂಗ್ಲಿಷ್ ವಸತಿ ಶಾಲೆಯಲ್ಲಿ ಓದಿ ಗುಣಮಟ್ಟದ ಶಿಕ್ಷಣ ಪಡೆದ ಹಿರಿಮೆ. ಪದವಿ ಮುಗಿಯುವ ಮೊದಲೇ ಅಧಿಕಾರ ಪಡೆದ ಸುದೈವಿ. ದೊಡ್ಡಮೇಟಿ ಅವರ ನಂತರ ಜನತಾ ಪರಿವಾರದ ಮೂಲಕ 1994ರಲ್ಲಿ ರೋಣ ಶಾಸಕರಾದರು. ಮುಂದೆ ಸೋಲಾದಾಗ ಮತ್ತೆ 2008ರಲ್ಲಿ ಬಿಜೆಪಿ ಮೂಲಕ ಗದುಗಿನ ಶಾಸಕರಾದರು. ತಾವು ಮಾಡುವ ಕೆಲಸಗಳಿಗೆ ಪ್ರಚಾರ ಮಾಡುವ, ಜನರನ್ನು ಓಲೈಸುವ ಮತ್ತು 'ಜನಪ್ರಿಯ' ಎನಿಸಿಕೊಳ್ಳುವ ಸ್ವಭಾವ ಇವರದಲ್ಲ, ಅದೇ ಇವರ ರಾಜಕೀಯ ಮಿತಿಯೂ ಹೌದು. ಆದರೆ ಕ್ಷೇತ್ರದ ಮತ್ತು ಜನರ ಕೆಲಸಗಳನ್ನು ಪಟ್ಟು ಹಿಡಿದು ಮಾಡುವ ಹಠ ಮಾತ್ರ ಇತ್ತು.

ಸಾಂಸ್ಕೃತಿಕ ಲೋಕದ ಡಾ. ಜಿ.ಬಿ. ಪಾಟೀಲ, ಆರ್.ಡಿ. ಕಡ್ಲಿಕೊಪ್ಪ ಹಾಗೂ ಕೆಲವು ಸ್ನೇಹಿತರು ಪರಿವಾರ ಸಮೇತ ತಮಿಳುನಾಡಿನ ಪ್ರವಾಸಕ್ಕೆ ಹೋಗಿದ್ದೆವು. ದೇವಸ್ಥಾನಗಳನ್ನು ನೋಡಿ ಬೇಸರವಾದಾಗ ಇಬ್ಬರೇ ಯಾವುದಾದರೂ ಮರದ ಕೆಳಗೆ ನಿಂತು ಸುದೀರ್ಘ ಹರಟೆ ಹೊಡೆದಾಗ ಅವರ ಜ್ಞಾನದ ಶಕ್ತಿ ಅರ್ಥವಾಗುತ್ತಾ ಹೋಗುತ್ತಿತ್ತು. ಅವರು ಅಮೆರಿಕಾ ಪ್ರವಾಸದಲ್ಲಿ ಇದ್ದಾಗ ಅಲ್ಲಿಂದ ಫೋನಾಯಿಸಿ ಸುದೀರ್ಘ ವಿವರಣೆ ನೀಡುತ್ತಿದ್ದರು.

ರೋಣದ ಮತ್ತೋರ್ವ ಪ್ರತಿಭಾವಂತ ಸ್ನೇಹಿತರಾದ ರವೀಂದ್ರನಾಥ ದೊಡ್ಡಮೇಟಿ ಅವರ ಜೊತೆಗೆ ಮಹಾರಾಷ್ಟ್ರಕ್ಕೆ ಹೋಗಿ ಅಣ್ಣಾ ಹಜಾರೆ ಅವರನ್ನು ಕಂಡು ಚರ್ಚೆ ಮಾಡಿ ಬಂದಿದ್ದೆವು. ಅವರು ಗದುಗಿನ ಶಾಸಕರಾಗಿದ್ದಾಗ ಅದೇ ಮಾದರಿಯಲ್ಲಿ ಗ್ರಾಮಗಳ ಅಭಿವೃದ್ಧಿಯ ಕನಸು ಸಾಕಾರಾಗೊಳಿಸಿದ್ದರು.

ಇವರ ಜೊತೆಗೆ ಕೆಲವು ಮಹತ್ವದ ಕಾರ್ಯಕ್ರಮಗಳು, ಸಮಾವೇಶಗಳಲ್ಲಿ ಪೂರ್ಣಪ್ರಮಾಣದ ಕೆಲಸ ಮಾಡಿದ ಹೆಮ್ಮೆ ನನಗಿದೆ. 76ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಅಂದಾನೆಪ್ಪ ದೊಡ್ಡಮೇಟಿ ಅವರ ಜನ್ಮಶತಮಾನೋತ್ಸವ ಹಾಗೂ ಬಸವತತ್ವ ಪ್ರೇರಿತವಾದ ಅವರ ಪುತ್ರರ ಕಲ್ಯಾಣ ಮಹೋತ್ಸವ ಹೀಗೆ ತುಂಬಾ ಅಚ್ಚುಕಟ್ಟಾಗಿ ಕಾರ್ಯಕ್ರಮ, ಸಮ್ಮೇಳನ ಮತ್ತು ಶತಮಾನೋತ್ಸವ ಯಶಸ್ವಿಯಾಗಲು ಪ್ರಾಮಾಣಿಕವಾಗಿ ದುಡಿದರು.

ಆರೋಗ್ಯವನ್ನು ಲೆಕ್ಕಿಸದ ಆತ್ಮವಿಶ್ವಾಸ, ಭಯಂಕರ ತಿರುಗಾಟ. ಒಮ್ಮೆ ಅಪಘಾತದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದರು, ಅದಾದ ಮೇಲೆ ಆರೋಗ್ಯ ಹಿಡಿತ ತಪ್ಪಿತು. ಆದರೂ ಧೈರ್ಯದಿಂದ ಓಡಾಡುವ ಆತ್ಮವಿಶ್ವಾಸ ಅವರದು.

ಕಳೆದ ವರ್ಷ ನಮ್ಮ ಸಂಸ್ಥೆಯ ಸಂಸ್ಥಾಪಕರಾದ ಡಾ. ಬಿ.ಎಫ್. ದಂಡಿನ ಅವರ ಕುರಿತು ಬರೆದ 'ದಣಿವರಿಯದ ದಾರಿ' ಪುಸ್ತಕ ಓದಿ ಭೇಟಿ ಆದರು. ನಂತರ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಅನೌಪಚಾರಿಕವಾಗಿ ಆಗಮಿಸಿ ತಮ್ಮ ಸರಳತೆ ಮತ್ತು ಗೌರವ ತೋರಿದರು.

ಅಗಲುವ ಮೊದಲು ಅನಾರೋಗ್ಯದ ಸಂದರ್ಭದಲ್ಲಿ ಆಸ್ಪತ್ರೆಗೆ ಹೋದಾಗ, ಅಲ್ಲಿದ್ದ ಮೋಹನ ಲಿಂಬಿಕಾಯಿ ಅವರೊಂದಿಗೆ ಅನೇಕ ಪ್ರಗತಿಪರ ವಿಚಾರಗಳ ಕುರಿತು ಮಾತನಾಡಿದರು. ಪ್ರಸಕ್ತ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತರಾಗಿದ್ದರು. ಆದರೆ ಅವರ ಆರೋಗ್ಯ ಪೂರಕವಾಗಿರಲಿಲ್ಲವೇನೋ? ಅನಾರೋಗ್ಯದ ಒತ್ತಡದ ಮಧ್ಯೆ ಓಡಾಟ ಮುಂದುವರೆಸಿದರು. ಓದು, ಮಾತುಕತೆ, ಜಗಳ, ಸಂವಾದಗಳಷ್ಟೇ ವೈಯಕ್ತಿಕ ಸಂಬಂಧ ಮತ್ತು ಸ್ನೇಹ ಕೂಡ ಅವರಿಗೆ ಬಹು ಪ್ರಿಯ.

ಬಹುಬೇಗ ಅರ್ಥವಾಗದ ರಾಜಕೀಯ ನಿಗೂಢ ನಡೆಯಂತೆ, ಯಾವುದೇ ಸುಳಿವು ನೀಡದೆ ಅಷ್ಟೇ ಅನಿರೀಕ್ಷಿತವಾಗಿ ಅರವತ್ತರ ಪ್ರಾಯದಲ್ಲಿ ಹೋಗಿದ್ದು ಅಪಾರ ನೋವನ್ನುಂಟು ಮಾಡಿದೆ. ಪ್ರಥಮ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರ ಕುಟುಂಬದವರು, ಅವರ ಆಶಯದಂತೆ ಆಯುರ್ವೇದ ಕಾಲೇಜನ್ನು ಆರಂಭಿಸಿ ಅರ್ಥಪೂರ್ಣ ಗೌರವ ಸಲ್ಲಿಸಿದ್ದಾರೆ. ಅವರ ಬಂಧುಗಳು, ಅಪಾರ ಅಭಿಮಾನಿಗಳ ಮನದಲ್ಲಿ ಮಾಸದ ನೆನಪಾಗಿರುವ ಅವರದು ಸದಾ ಸ್ಮರಣೀಯ ವ್ಯಕ್ತಿತ್ವ.

**–ಪ್ರೊ. ಸಿದ್ದು ಯಾಪಲಪರವಿ,**
ಕಾರಟಗಿ. ಪ್ರಾಚಾರ್ಯರು,
ಕೆ.ವಿ.ಎಸ್.ಆರ್.
ಕಾಲೇಜು-ತಿಮ್ಮಾಪೂರ.

### ಅವರ ಮತ್ತು ನನ್ನ ಮಧ್ಯೆ

ರಾಜಕೀಯೇತರ ಸ್ನೇಹ, ಬಹಳಷ್ಟು ಜನ ಅಧಿಕಾರ ಕಾರಣದಿಂದ ಅವರ ಜೊತೆಗೆ ಗುರುತಿಸಿಕೊಂಡಿದ್ದೇನೆ ಎಂದು ತಪ್ಪಾಗಿ ಭಾವಿಸಿ ಮುಸು ಮುಸು ಎನ್ನುತ್ತಿದ್ದರು. ಆದರೆ, ನಮ್ಮದು ಯಾವ ರೀತಿಯ ಸ್ನೇಹ ಎಂಬ ಸ್ಪಷ್ಟತೆ ಇಬ್ಬರಲ್ಲೂ ಇತ್ತು. ನಮ್ಮ ಕುಟುಂಬದ ಹಿರಿಯ ಹಿತೈಷಿಯಂತೆ, ಅತ್ಯಂತ ಸರಳವಾಗಿ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ಬಹಳಷ್ಟು ಜನರಿಗೆ ಗೊತ್ತಿರದ ಸರಳತೆ, ನಿರಹಂಕಾರ ಮನೋಭಾವ ಅವರದು. ಅಪಾರವಾದ ಓದು ಮತ್ತು ಚರ್ಚೆ ಅವರ ವಿಶೇಷ. ಸಾರ್ವಜನಿಕ ಭಾಷಣಗಳಿಗಿಂತ ಖಾಸಗಿ ಚರ್ಚೆಯಲ್ಲಿ ಹಾಗೂ ವಿಧಾನಸಭಾ ಕಲಾಪಗಳಲ್ಲಿ ಅದ್ಭುತವಾಗಿ ಮಾತನಾಡುತ್ತಿದ್ದರು. ದೇಶ-ವಿದೇಶ, ಕೃಷಿ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ನೀರಾವರಿ ಬಗ್ಗೆ ಅಪಾರವಾದ ಜ್ಞಾನವಿತ್ತಾದರೂ, ಅದನ್ನು ತೋರಿಸಿಕೊಳ್ಳುವ ಸ್ವಭಾವ ಅವರದಲ್ಲ. ಬೈಠಕ್ ಕುಳಿತರೆ ಸಾಕು ಗಂಟೆಗಟ್ಟಲೆ ವಿವರಣೆ ಮಾಡುತ್ತಿದ್ದರು.

# ಕನ್ನಡ ಬಳಕೆಯ ಬಗ್ಗೆ ಯುವಕರು ಜಾಗೃತರಾಗಲಿ



■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹುಲಕೋಟಿಯ ಗದಗ ಸಹಕಾರಿ ಗಿರಣಿಯ ಸ್ವತಂತ್ರ ಪ.ಪೂ ಮಹಾವಿದ್ಯಾಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮ-50ರ ಸರಣಿ ಕಾರ್ಯಕ್ರಮದ ಮೂರನೆಯ ಸರಣಿಯನ್ನು ಆಯೋಜಿಸಲಾಗಿತ್ತು.

ಅಂದಾನಪ್ಪ ದೊಡ್ಡಮೇಟಿ ಅವರ ಮೊಮ್ಮಗ ರವೀಂದ್ರನಾಥ ದೊಡ್ಡಮೇಟಿ ಕಾರ್ಯಕ್ರಮ ಉದ್ಘಾಟಿಸಿ ಕನ್ನಡದ ವಿಶಿಷ್ಟತೆಗಳನ್ನು, ಕರ್ನಾಟಕದ ವ್ಯಾಪ್ತಿಯನ್ನು, ಕನ್ನಡಿಗರ ಸಾಧನೆ-ಯಶೋಗಾಥೆಗಳನ್ನು ಅಭಿವ್ಯಕ್ತಪಡಿಸಿದರು.

'ಏಕೀಕರಣಕ್ಕೆ ಗದಗ ಜಿಲ್ಲೆಯ ಕೊಡುಗೆ' ವಿಷಯ ಕುರಿತು ಉಪನ್ಯಾಸ ಮಂಡಿಸಿದ ಪ್ರೊ. ಸಿದ್ಧಲಿಂಗೇಶ ಸಜ್ಜನಶೆಟ್ಟರ, ಅಂದು ಸಾಹಿತ್ಯ ಸಮ್ಮೇಳನದ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದ ದಿ. ಕೆ.ಎಚ್. ಪಾಟೀಲ ಅವರು ಈ ಹೋರಾಟದಲ್ಲಿ ಜನರ ಆಶಯವಾದ ಕರ್ನಾಟಕ ಎನ್ನುವ ಹೆಸರನ್ನು ಅಧಿಕೃತಗೊಳಿಸುವಲ್ಲಿ ಸತತ ಹೋರಾಟ ಮಾಡಿದರು. ಜನರ ಆಶಯಕ್ಕೆ ಬಲವನ್ನು ತಂದರು ಎಂದರು.

ತಾಲೂಕಾ ಕಸಾಪ ಅಧ್ಯಕ್ಷೆ ಡಾ.ರಶ್ಮಿ ಅಂಗಡಿ ಮಾತನಾಡುತ್ತ, ಕನ್ನಡದ ಬಳಕೆಯ ಬಗೆಗೆ ಯುವಜನರಲ್ಲಿ ಹೆಚ್ಚು ಹೆಚ್ಚು ಜಾಗೃತಿಯನ್ನು ಮೂಡಿಸುವ ಅವಶ್ಯಕತೆ ಇದೆ. ಇಂದು ಶಿಕ್ಷಣವೂ ಜಾಗತೀಕರಣದತ್ತ ವಾಲುತ್ತಿರುವಾಗ ನಾವು ಜಾಗೃತ ಹೆಜ್ಜೆಗಳನ್ನಿಟ್ಟು ಕನ್ನಡವನ್ನು ಸರ್ವಮಾನ್ಯವಾಗಿಸಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಶ್ರೀಧರ ದೇಶಪಾಂಡೆ ವಹಿಸಿಕೊಂಡಿದ್ದರು. ಮಹಾವಿದ್ಯಾಲಯದ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಡಾ. ಅರ್ಜುನ ಗೊಳಸಂಗಿ ಮಾರ್ಗದರ್ಶನದಲ್ಲಿ ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ತಾಲೂಕಾ ಕಸಾಪ ಕೋಶಾಧ್ಯಕ್ಷೆ ಪಾರ್ವತಿ ಬೇವಿನಮರದ ಹಾಜರಿದ್ದರು. ಸಂಘಟನಾ ಕಾರ್ಯದರ್ಶಿ ವಿಶ್ವನಾಥ ಬೇಂದ್ರೆ ವಂದಿಸಿದರು.

## ಹುಲ್ಲೂರು ಅಮೋಘ ಸಿದ್ದೇಶ್ವರ ಸಂಸ್ಥಾನಮಠದ ಲೋಕಾರ್ಪಣೆ, ಧರ್ಮಸಭೆ

# ಮಠ-ಮಂದಿರಗಳು ನಮ್ಮ ಸಂಸ್ಕೃತಿಯ ಪ್ರತೀಕ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹಿಂದೂ ಧರ್ಮ ಶ್ರೇಷ್ಠ ಸಂಸ್ಕೃತಿ ಹೊಂದಿದೆ. ಈ ಧರ್ಮ ಸಭ್ಯತೆ ಮತ್ತು ಸಂಸ್ಕಾರ ಎರಡನ್ನೂ ಜಗತ್ತಿಗೆ ನೀಡಿದೆ. ಮಠ-ಮಂದಿರಗಳನ್ನು ನಿರ್ಮಿಸುವದರೊಂದಿಗೆ ಅವುಗಳಲ್ಲಿ ನಿತ್ಯ ಧಾರ್ಮಿಕ ಚಿಂತನೆಗಳು ನಡೆದಾಗ ಅಲ್ಲಿ ಧರ್ಮ ನೆಲೆಯೂರಲು ಸಾಧ್ಯ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಅವರು ತಾಲೂಕಿನ ಹುಲ್ಲೂರು ಗ್ರಾಮದ ಅಮೋಘ ಸಿದ್ದೇಶ್ವರ ಸಂಸ್ಥಾನಮಠದ ಲೋಕಾರ್ಪಣೆ ಅಂಗವಾಗಿ ಗುರುವಾರ ನಡೆದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಠ-ಮಂದಿರಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿವೆ. ಅವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವದು ನಾಗರಿಕರ ಕರ್ತವ್ಯ. ಹುಲ್ಲೂರು ಚಿಕ್ಕ ಗ್ರಾಮವಾದರೂ ಇಲ್ಲಿನ ಜನರು ಹಮ್ಮಿಕೊಂಡ



ಇಂತಹ ವಿಶಿಷ್ಟ ಕಾರ್ಯಕ್ರಮ ಎಲ್ಲರಿಗೂ ಮಾದರಿಯಾಗಲಿ. ಗುರುವಿನ ಆಶೀರ್ವಾದ ಸದಾ ಇರಲಿ ಎಂದು ಹಾರೈಸಿದರು.

ಹಾಲಮತ ಧರ್ಮಗ್ರಂಥ ಕರ್ತೃ, ಹಿರಿಯ ಸಾಹಿತಿ, ಸಂಶೋಧಕ ಪಂ.ಚಂದ್ರಕಾಂತ ಗುರೂಜಿ ಮಾತನಾಡಿ, ಜೀವನದಲ್ಲಿ ಗುರಿ, ಛಲ, ಗುರುವಿನ ಆಶೀರ್ವಾದ ಇದ್ದರೆ ಮಾತ್ರವೇ ವಿದ್ಯೆ ಕಲಿತು ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಲು ಸಾಧ್ಯ. ನಾವು ಗಳಿಸಿದ ಆಸ್ತಿ, ಅಂತಸ್ತು, ಸಂಪತ್ತು ಯಾವುದೂ ಕೊನೆಯವರೆಗೂ ಉಳಿಯದು. ಆದರೆ ಕಲಿತ ವಿದ್ಯೆ ಮಾತ್ರ ಕೊನೆಯವರೆಗೂ ಜತೆ-ಗಿರುತ್ತದೆ. ಶಿಕ್ಷಣದೊಂದಿಗೆ ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಒಳ್ಳೆಯದನ್ನು ಮಾಡುವ ಉದ್ದೇಶವನ್ನು ಹೊಂದಿ ಸಾಗುವವನೇ ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯಾಗುತ್ತಾನೆ ಎಂದರು.

ಕಾರ್ಯಕ್ರಮದಲ್ಲಿ ಸಂಕದಾಳದ ಶಿವಯೋಗಿ ವಾಗೀಶ ಪಂಡಿತಾರಾಧ್ಯರು, ಹುಸೈನ್ ಸ.ಆದಿ, ಹೊಸ್ಕಾರ ಉಡುಪಿ, ಪಂಚಾಕ್ಷರಯ್ಯ ಅಮೋಘಮಠ, ಮಹಾದೇವಯ್ಯ ಅಮೋಘಮಠ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಅಮೋಘಸಿದ್ದೇಶ್ವರಮಠ ಸೇವಾ ಸಮಿತಿ ಅಧ್ಯಕ್ಷ ವೀರೇಂದ್ರಗೌಡ ಪಾಟೀಲ ವಹಿಸಿದ್ದರು. ಅತಿಥಿಗಳಾಗಿ ಶೇಖಣ್ಣ ಕಾಳೆ, ನಿಂಗಪ್ಪ ಬನ್ನಿ, ವಿರುಪಾಕ್ಷಪ್ಪ ಪಡಗೇರಿ, ನೀಲಪ್ಪ ಶರಸೂರಿ, ಭಾಗ್ಯಶ್ರೀ ಬಾಬಣ್ಣ, ಆನಂದ ಗಡ್ಡದೇವರಮಠ, ಸೋಮಣ್ಣ ಬೆಟಗೇರಿ, ಯಲ್ಲವ್ವ ದುರ್ಗಣ್ಣವರ, ಅಮರಪ್ಪ ಗುಡಗುಂಟಿ, ಎಚ್.ಎನ್. ಕೆರುರ, ಹಾಲಪ್ಪ ಸೂರಣಗಿ, ಮುದಕಪ್ಪ ಗದ್ದಿ ಸೇರಿದಂತೆ ಅಮೋಘಮಠದ ಹಿರಿಯರು, ಭಕ್ತರು ಹಾಜರಿದ್ದರು.

ಇದಕ್ಕೂ ಮುನ್ನ ಶಿರಹಟ್ಟಿ ಸಂಸ್ಥಾನಮಠದ ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು, ಹೂವಿನಶಿಗ್ಲಿಯ ಚನ್ನವೀರ ಮಹಾಸ್ವಾಮಿಗಳು, ಮಣಕವಾಡದ ಮೃತ್ಯುಂಜಯ ಮಹಾಸ್ವಾಮಿಗಳು, ಬೆಳ್ಳಟ್ಟಿಯ ಬಸವರಾಜ ಮಹಾಸ್ವಾಮಿಗಳು ಭೇಟಿ ನೀಡಿ ಆಶೀರ್ವಾದ ಅನುಗ್ರಹಿಸಿದರು.

ಇಂದಿನ ದಿನಮಾನಗಳಲ್ಲಿ ಮಕ್ಕಳು ತಮ್ಮ ವ್ಯಕ್ತಿತ್ವವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಇಂದು ನಾವು ಏನಾದರೂ ಗಳಿಸಿದ್ದರೆ ಅದೆಲ್ಲವೂ ಈ ಸಮಾಜದಿಂದ ಗಳಿಸಿದ್ದು. ಹಾಗಾಗಿ ಈ ಸಮಾಜದಿಂದ ಪಡೆದ ಸ್ವಲ್ಪವನ್ನಾದರೂ ನಾವು ಮತ್ತೆ ಸಮಾಜಕ್ಕೆ ಮರಳಿ ನೀಡಬೇಕು ಎಂದು ನುಡಿದ ಅವರು, ಅಮೋಘ ಸಿದ್ದೇಶ್ವರಮಠದ ಬಗ್ಗೆ ಇಲ್ಲಿನ ಜನರಿಗೆ ಇರುವ ಭಕ್ತಿಭಾವದಿಂದ ಉತ್ತಮ ಕಾರ್ಯಗಳು ನಡೆಯುತ್ತಿರುವದು ಸ್ತುತ್ಯಾರ್ಹವಾಗಿದೆ.

– ಪಂ. ಚಂದ್ರಕಾಂತ ಗುರೂಜಿ.

# ಇನ್ನರ್‌ವ್ಹೀಲ್ ಕ್ಲಬ್‌ನ ಸರಿತಾ ಲುನಾನಿ ಇಂದು ನಗರಕ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಇನ್ನರ್‌ವ್ಹೀಲ್ ಕ್ಲಬ್ ಗದಗ ಬೆಟಗೇರಿಯ ಸುವರ್ಣ ಮಹೋತ್ಸವ ಕಾರ್ಯಕ್ರಮದ ನಿಮಿತ್ತ ಅಂತಾರಾಷ್ಟ್ರೀಯ ಇನ್ನರ್‌ವ್ಹೀಲ್ ಸಂಸ್ಥೆಯ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಸರಿತಾ ಲುನಾನಿ ನ.25ರಂದು ನಗರಕ್ಕೆ ಆಗಮಿಸಲಿದ್ದಾರೆ.

ಇವರು ಇನ್ನರ್‌ವ್ಹೀಲ್ ಸಂಸ್ಥೆಯ ಸದಸ್ಯತ್ವ ಪಡೆದು, ಅದನ್ನು ಮುಖ್ಯ ವೇದಿಕೆಯನ್ನಾಗಿ ಮಾಡಿಕೊಂಡು ಸಮಾಜೋಪಯೋಗಿ ಕೆಲಸಗಳನ್ನು ಮಾಡುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾಮಾಜಿಕ ಕಾರ್ಯ ಚಟುವಟಿಕೆಯಲ್ಲಿ ಅವಿರತ ಶ್ರಮ ವಹಿಸುತ್ತಿದ್ದಾರೆ.

27 ವರ್ಷಗಳ ಇನ್ನರ್‌ವ್ಹೀಲ್ ಇತಿಹಾಸದಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ತಮ್ಮ ಸಾಮರ್ಥ್ಯದಿಂದ ಸಂಸ್ಥೆಯ ಉದಯೋನ್ಮುಖ ಬೆಳವಣಿಗೆಗೆ ಸಹಕಾರಿಯಾಗಿ ಸಂಸ್ಥೆಯ ಗರಿಮೆಯನ್ನು ಹೆಚ್ಚಿಸಿದ್ದಾರೆ. ಸದ್ಯ ಅಂತಾರಾಷ್ಟ್ರೀಯ ಖಜಾಂಚಿಯಾಗಿ 3ನೇ ಅವಧಿಗೆ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಒಬ್ಬ ಸಾಧಾರಣ ಮಹಿಳೆ ಅವಕಾಶ ಸಿಕ್ಕರೆ ಯಾವ ಎತ್ತರ ತಲುಪಲು ಸಾಧ್ಯ ಎಂಬುದಕ್ಕೆ ಸರಿತಾ ಸಾಕ್ಷಿಯಾಗಿದ್ದಾರೆ. ಅವರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸುತ್ತಿರುವದು ಸಂತೋಷ ತಂದಿದೆ ಎಂದು ಗದಗ-ಬೆಟಗೇರಿ ಇನ್ನರ್ ವ್ಹೀಲ್ ಕ್ಲಬ್‌ನ ಪಿಡಿಸಿ ಪ್ರೇಮಾ ಗುಳಗೌಡರ ತಿಳಿಸಿದ್ದಾರೆ.

### ಮಕ್ಕಳ ಹಕ್ಕುಗಳ ಸಭೆಯಲ್ಲಿ ಅವ್ಯವಸ್ಥೆ, ಅಳಲು ತೋಡಿಕೊಂಡ ವಿದ್ಯಾರ್ಥಿಗಳು

# ಶೌಚಾಲಯ ಒದಗಿಸಲು ಕುರಡಗಿ ಮಕ್ಕಳ ಆಗ್ರಹ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

'ನಮ್ಮ ಶಾಲಿಯೊಳಗ ಶೌಚಾಲಯದ ಸೌಲಭ್ಯ ಇಲ್ರಿ. ದಿನಾ ಮುಂಜಾನೆ ಶಾಲೆಗೆ ಬಂದ ಕೂಡ್ಲೆ ಹಿಂದಿನ ರಾತ್ರಿ ಕುಡುಕರು ಕುಡುದ ಒಗದ ಬಾಟಲಿ, ಪಾಕೀಟ್‌ಗಳನ್ನ ತಗೆದು ಒಗಿಯೂದು ಸಾಕಾಗೇತ್ರಿ ಸರ... ಮತ್ತ ನಮ್ಮ ಶಾಲಿ ಕಂಪೌಂಡ ಸುತ್ತ-ಮುತ್ತ ಮಲ ವಿಸರ್ಜನೆ ಮಾಡ್ತಾರ್ರಿ, ನಮಗೆ ದುರ್ನಾತ ತಡೆಯೂದ ಕಷ್ಟ ಆಗ್ಯೆತ್ರಿ, ಇದಕ್ಕ ಏನಾರ ಪರಿಹಾರ ಕೊಡ್ರಿ' ಎಂದು ಕುರಡಗಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದರೆ, ಸಭೆಯಲ್ಲಿ ಸೇರಿದ್ದ ಅಧಿಕಾರಿಗಳು ಅರೆಕ್ಷಣ ದಿಗಿಲಿಗೊಳಗಾಗಿದ್ದರು.

ರೋಣ ತಾಲೂಕಿನ ಕುರಡಗಿಯಲ್ಲಿ ಈಚೆಗೆ ಮಕ್ಕಳ ಹಕ್ಕುಗಳ ಸಭೆಯು ಗ್ರಾಮ ಪಂಚಾಯಿತಿ ಆವರಣದಲ್ಲಿ ಏರ್ಪಾಡಾಗಿತ್ತು. ಸಭೆಯಲ್ಲಿ ಗ್ರಾ.ಪಂ ಅಧ್ಯಕ್ಷರು, ಸದಸ್ಯರು ಮತ್ತು ತಾ.ಪಂ ಅಧಿಕಾರಿಗಳು ಪಾಲ್ಗೊಂಡಿದ್ದರು. ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಗ್ರಾ.ಪಂ ಅಧ್ಯಕ್ಷ ವೀರಪ್ಪ ರಾಮಣ್ಣವರ, ಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ಈಗಲೇ ತಿಳಿದಿರಬೇಕು. ಅವುಗಳನ್ನು ಕೇಳುವ ಧೈರ್ಯವನ್ನೂ ಸಹ ಅವರು ಬೆಳೆಸಿಕೊಳ್ಳಬೇಕೆಂದರು.

ರೋಣ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ರವಿ ಮಾತನಾಡಿ, ಶಾಲಾ ಶಿಕ್ಷಕರು ತಮ್ಮ ಪಠ್ಯದ ಕಾರ್ಯದ ಜೊತೆಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಮಕ್ಕಳು ಕಲಿಯುವ ಶಾಲೆಯ ಸುತ್ತಲಿನ ವಾತಾವರಣವನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವ ಕಡೆಗೆ ಗಮನ ಹರಿಸಬೇಕು. ಈ ಮಹತ್ವದ ವಿಷಯಗಳನ್ನು ಮಕ್ಕಳಿಗೂ ತಿಳಿಸಿ ಅವರೂ ಸಹ ಶಾಲಾ ಪರಿಸರವನ್ನು ಸಮರ್ಪಕವಾಗಿ ಇಟ್ಟುಕೊಳ್ಳುವಂತೆ ಪ್ರೇರಣೆ ನೀಡಬೇಕೆಂದರು.

ಮಕ್ಕಳ ಹಕ್ಕುಗಳ ಬಗ್ಗೆ ಮಾತನಾಡಿ, ಯಾರೂ ಮಕ್ಕಳ ಹಕ್ಕುಗಳ ಕಡೆಗೆ ನಿರ್ಲಕ್ಷ್ಯ ತೋರಬಾರದು. ಸರಕಾರ ಮಕ್ಕಳಿಗಾಗಿ ಈ ಹಕ್ಕುಗಳ ಯೋಜನೆಯನ್ನು ಜಾರಿಗೆ ತಂದಿದೆ. ಅದನ್ನು ಸಮರ್ಪಕವಾಗಿ ಪಾಲನೆ ಮಾಡಬೇಕಾಗಿರುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಶಾಲಾ ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರು, ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು. ಗ್ರಾಮ ಅಭಿವೃದ್ಧಿ ಅಧಿಕಾರಿ ಶಿಲ್ಪಾ ಕವಲೂರ ನಿರೂಪಿಸಿ, ವಂದಿಸಿದರು.



ನಾನು ರೋಣ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಬಂದು ಕೆಲವೇ ತಿಂಗಳುಗಳಾದವು. ರೋಣ ತಾಲೂಕು ಬಹಳ ದೊಡ್ಡ ತಾಲೂಕು. ಇಲ್ಲಿ 300 ಶಾಲೆಗಳಿವೆ. ಕುರಡಗಿ ಶಾಲೆಯ ವಿಷಯ ನನ್ನ ಗಮನಕ್ಕೂ ಬಂದಿದೆ. ಸೋಮವಾರ ಕುರಡಗಿ ಶಾಲೆಗೆ ಭೇಟಿ ನೀಡಿ, ಅಲ್ಲಿನ ಸ್ಥಿತಿಗತಿಗಳನ್ನು ವೀಕ್ಷಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ, ಶಿಕ್ಷಕರಿಗೆ ತಿಳಿಸುತ್ತೇನೆ.

– ಆರ್.ಎನ್. ಹುರುಳಿ.
ಕ್ಷೇತ್ರ ಶಿಕ್ಷಣಾಧಿಕಾರಿಗಳು, ರೋಣ.

ಮಕ್ಕಳ ಹಕ್ಕುಗಳ ಸಭೆಯಲ್ಲಿ ಮಕ್ಕಳಿಂದ ಬಂದ ದೂರುಗಳ ಬಗ್ಗೆ ವಿಶೇಷ ಗಮನ ನೀಡಲು ಗ್ರಾಮ ಪಂಚಾಯಿತಿಗೆ ಈಗಾಗಲೇ ತಿಳಿಸಿದ್ದೇನೆ. ನರೇಗಾ ಯೋಜನೆಯಡಿ ಮಕ್ಕಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಅವರಿಗೆ ಆಟದ ಮೈದಾನ, ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸಹ ಸೂಚಿಸಿದ್ದೇನೆ. ತಾಲೂಕಿನ ಯಾವುದೇ ಶಾಲೆಯಲ್ಲಿ ಕುರಡಗಿ ಶಾಲೆಯಲ್ಲಿ ಕಂಡು ಬಂದಂತಹ ಆತಂಕದ ಸಂಗತಿಗಳು ಎದುರಾಗದಂತೆ ಕ್ರಮ ವಹಿಸಲು ಈ ಮೂಲಕ ಎಲ್ಲ ಮುಖ್ಯ ಶಿಕ್ಷಕರಿಗೆ ಎಚ್ಚರಿಸುತ್ತೇನೆ. ಹಾಗೇನಾದರೂ ಆದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಕ್ರಮ ಜರುಗಿಸಲು ಆದೇಶಿಸುತ್ತೇನೆ.

– ರವಿ. ರೋಣ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ.

# ಅತಿಥಿ ಉಪನ್ಯಾಸಕರ ಪರ ಧ್ವನಿ ಎತ್ತುವೆ: ಸಂಸದ ಸಂಗಣ್ಣ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸೇವಾ ಕಾಯಂಗೆ ಆಗ್ರಹಿಸಿ ಕೊಪ್ಪಳದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಮುಂದುವರಿದಿದೆ.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಂಸದ ಸಂಗಣ್ಣ ಕರಡಿ, ಧರಣಿನಿರತ ಅತಿಥಿ ಉಪನ್ಯಾಸಕರ ಅಳಲು ಆಲಿಸಿದರು. ಜಿಲ್ಲಾ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ವೀರಣ್ಣ ಸಜ್ಜನರ್ ಸಂಸದರಿಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಶಿಕ್ಷಣ ವ್ಯವಸ್ಥೆಯಲ್ಲಿ ಉಪನ್ಯಾಸಕರ ಪಾತ್ರ ಮಹತ್ವದ್ದು. ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಗೌರವಧನ ಹೆಚ್ಚಿಸುವ ಮೂಲಕ ನೈತಿಕ ಧೈರ್ಯ ನೀಡಿದೆ. ಆದರೆ ಸೇವಾ ಕಾಯಮಾತಿಯ ಬೇಡಿಕೆ ಈಡೇರಿಸಲಾಗಿಲ್ಲ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಈ ಬಗ್ಗೆ ಭರವಸೆ ನೀಡಿದ್ದು, ನಿಮ್ಮ ಹೋರಾಟ ನ್ಯಾಯಯುತವಾಗಿದೆ. ಈ ಬಗ್ಗೆ ತಾವು ಸಹ ಧ್ವನಿ ಎತ್ತುವುದಾಗಿಯೂ, ಅತಿಥಿ ಉಪನ್ಯಾಸಕರ ಹೋರಾಟವನ್ನು ಬೆಂಬಲಿಸುವುದಾಗಿಯೂ ತಿಳಿಸಿದರು.

ಈ ವೇಳೆ ಡಾ.ವೀರಣ್ಣ ಸಜ್ಜನರ, ಡಾ ಪ್ರಕಾಶ್ ಬಳ್ಳಾರಿ, ಡಾ. ತುಕಾರಾಂ ನಾಯ್ಕ, ಡಾ. ಸಣ್ಣ ದೇವೇಂದ್ರ ಸ್ವಾಮಿ, ಬಸವರಾಜ್ ಕರುಗಲ್, ಶಿವಣ್ಣ, ಶಿವಬಸಪ್ಪ ಮಸ್ಕಿ ಜ್ಞಾನೇಶ ಪತ್ತಾರ, ಗುರುಬಸವರಾಜ್, ಕಲ್ಲೇಶ್ ಅಬ್ಬಿಗೇರಿ, ವಿಜಯ ತೆ-ೂೕಟದ, ವಿಜಯ ಕುಲಕರ್ಣಿ, ಪ್ರಕಾಶ್ ಜಡಿ, ಶಿವಪ್ರಸಾದ ಹಾದಿಮನಿ, ಕಲ್ಲಯ್ಯ ಪೂಜಾರ, ಮಹೇಶ, ಗೋಣಿಬಸಪ್ಪ, ಸಂತೋಷ ಅವಧಿ, ಉಮೇಶ ಕಾತಾರಾಕಿ, ಡಾ.ಗಿರಿಜಾ ತುರಾಮುರಿ, ಲತಾ, ವೀಣಾ, ಉಷಾ, ಅಕ್ಕಮಹಾದೇವಿ, ಶಿವಮೂರ್ತೆಪ್ಪ ಮೊದಲಾದವರು ಇದ್ದರು.




### ವಕೀಲ ಸಾಹಿತ್ಯ ಪರಿಷತ್ ಬೆಂಬಲ

ಎರಡನೆಯ ಈ ದಿನದ ಮುಷ್ಕರಕ್ಕೆ ಕೊಪ್ಪಳದ ನ್ಯಾಯವಾದಿ, ವಕೀಲ ಸಾಹಿತ್ಯ ಪರಿಷತ್ ಮುಖಂಡ ವಿಜಯ ಅಮೃತರಾಜ್ ಆಗಮಿಸಿ ನೈತಿಕ ಬೆಂಬಲ ನೀಡಿ ಸಾಂದರ್ಭಿಕವಾಗಿ ಮಾತನಾಡಿದರು.

# ಸ್ನೇಹ, ಸಂಬಂಧಕ್ಕೆ ಬೆಲೆ ಕಟ್ಟಲಾಗದು



■ವಿಜಯಸಾಕ್ಷಿ ಸುದ್ದಿ, ಗುಲಬರ್ಗಾ

ಸಭಾಪತಿ ಬಸವರಾಜ ಹೊರಟ್ಟಿ ಅವರು ಗುಲ್ಬರ್ಗದಲ್ಲಿ ಸಹಪಾಠಿ, ಆತ್ಮೀಯ ಸ್ನೇಹಿತ ಎನ್.ಡಿ. ಪಾಟೀಲ್ ಅವರ ಮನೆಯಲ್ಲಿ ತಮ್ಮ ವಿದ್ಯಾರ್ಥಿ ಜೀವನದ ಗೆಳೆಯರೊಂದಿಗೆ ಸವಿ ನೆನಪುಗಳನ್ನು ಮೆಲಕು ಹಾಕಿದರು.

ನಾನು ಎಷ್ಟೇ ಎತ್ತರಕ್ಕೆ ಬೆಳೆದರೂ ಬಾಲ್ಯ ಸ್ನೇಹಿತರು, ಊರಿನವರು, ವಿದ್ಯಾರ್ಥಿ ಜೀವನದ ಗೆಳೆಯರು, ಸಹಪಾಠಿಗಳು ಅಂದರೆ ಪಂಚಪ್ರಾಣ. ಇಂದಿಗೂ ನನ್ನ ಪ್ರಾಥಮಿಕ ಹಂತದ ಸ್ನೇಹಿತರನ್ನು ಮರೆತಿಲ್ಲ. ಸ್ನೇಹಕ್ಕೆ, ಸಂಬಂಧಕ್ಕೆ ಬೆಲೆ ಕಟ್ಟಲಾಗದು. ಅಧಿಕಾರ, ಅಂತಸ್ತು, ಹುದ್ದೆಗಳು ಕೆಲ ಸಮಯ ಮಾತ್ರ. ಆದರೆ ನಾವು ನಮ್ಮ ಸ್ನೇಹಿತರೊಂದಿಗೆ ಕಳೆದ ದಿನಗಳು ಜೀವನದುದ್ದಕ್ಕೂ ಮರೆಯಲಾರದ ಸಂಗತಿಗಳು ಎಂದರು.

ಈ ಸಂದರ್ಭದಲ್ಲಿ ಹಿರಿಯ ಸಹಕಾರಿ ಧುರೀಣ ಎನ್.ಡಿ. ಪಾಟೀಲ್, ಸಿಂದಗಿ ಶಾಸಕರಾದ ಅಶೋಕ್ ಮನಗೂಳಿ, ಎಚ್.ಕೆ.ಇ. ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಡಾ. ಶರಣು ಅರವಾಳ, ಖ್ಯಾತ ವೈದ್ಯರಾದ ಡಾ. ರಾಜಶೇಖರ್ ಪಾಟೀಲ್, ರಾಜ್ಯ ಸಹಕಾರ ಮಂಡಳಿಯ ನಿರ್ದೇಶಕ ಎಂ.ಡಿ. ಪಾಟೀಲ್, ಕೇಂದ್ರೀಯ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಪಾಸೋಡಿ, ಗುಲ್ಬರ್ಗ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

# ಭಾರತೀಯ ಸಂಪ್ರದಾಯ ಶ್ರೇಷ್ಠತೆಯನ್ನು ಹೊಂದಿದೆ

▶▶ಮೊದಲನೇ ಪುಟದಿಂದ

ಧರ್ಮವನ್ನು ಬೆಳೆಸಬೇಕು ಎನ್ನುವ ಉದ್ದೇಶದಿಂದ ಎಲ್ಲ ಧರ್ಮದವರು ಗಲ್ಲಿ-ಗಲ್ಲಿಗಳಲ್ಲಿ ದೇವಸ್ಥಾನಗಳನ್ನು ನಿರ್ಮಾಣ ಮಾಡಿದರು. ದೇವನೊಬ್ಬ, ನಾಮ ಹಲವು ಎನ್ನುವಂತೆ ಎಲ್ಲರೂ ವಿವಿಧ ದೇವರುಗಳ ಹೆಸರಿನಲ್ಲಿ ಪೂಜೆ ಮಾಡುತ್ತಾರಾದರೂ, ಅದು ಒಂದೇ ದೇವರಿಗೆ ಮುಟ್ಟುತ್ತದೆ. ಅನೇಕರಿಗೆ ಆಸ್ತಿ ಎಷ್ಟಿದ್ದರೂ ಸಹ ನೆಮ್ಮದಿ ಇರುವದಿಲ್ಲ. ಆದರೆ ದೇಶಕ್ಕೆ ಅನ್ನ ನೀಡುವ ರೈತನಿಗೆ ಆಸ್ತಿ ಇರದಿದ್ದರೂ ನೆಮ್ಮದಿ ಇರುತ್ತದೆ ಎಂದರು.

ನೆಮ್ಮದಿಯ ಬಾಳು ನಮ್ಮದಾಗಬೇಕು. ನಮ್ಮ ಭಾರತೀಯ ಸಂಪ್ರದಾಯ ಶ್ರೇಷ್ಠತೆಯನ್ನು ಹೊಂದಿದ್ದು, ಭಾರತೀಯರು ಹೆಣ್ಣನ್ನು ತಾಯಿ ಹಾಗೂ ದೇವತೆಯ ರೂಪದಲ್ಲಿ ನೋಡುತ್ತಾರೆ. ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ನೋಡುತ್ತಾರೆ. ಅಲ್ಲಿ ಒಂದು ದಿನಕ್ಕೆ ಮದುವೆ ಮರುದಿನಕ್ಕೆ ವಿಚ್ಛೇದನ ಎನ್ನುವಂತಾಗಿದೆ. ನಮ್ಮ ಸಂಪ್ರದಾಯದಲ್ಲಿ ಮದುವೆಯಾದವರು ಸದಾ ಹೊಂದಾಣಿಕೆಯಿಂದ ಬಾಳುವದು ಇಲ್ಲಿನ ಸಂಸ್ಕೃತಿಯಾಗಿದೆ. ಉತ್ತಮ ಸಂಸ್ಕಾರವನ್ನು ನಮ್ಮ ಮಕ್ಕಳಿಗೆ ಕಲಿಸಿಕೊಡುವದು ಅತ್ಯವಶ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾನ್ನಿಧ್ಯ ವಹಿಸಿದ್ದ ಮೈಲಾರದ ಪ್ರಧಾನ ಅರ್ಚಕ ಗುರು ವೆಂಕಪ್ಪಯ್ಯ ಒಡೆಯರ ಸ್ವಾಮಿಗಳು ಮಾತನಾಡಿ, ಗುರುವಿನ ಆಶೀರ್ವಾದ ಇದ್ದರೆ ಮಾತ್ರವೇ ವಿದ್ಯೆ ಕಲಿತು ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಲು ಸಾಧ್ಯ. ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಒಳ್ಳೆಯದನ್ನು ಮಾಡುವ ಉದ್ದೇಶವನ್ನು ಹೊಂದಿ ಸಾಗುವವನೇ ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯಾಗುತ್ತಾನೆ ಎಂದು ನುಡಿದರು.

ಮೈಸೂರು ನಿಜಗುಣ ಸಿದ್ದಲಿಂಗ ವಡೆಯರ ಸಿದ್ದಯ್ಯ ಅಮೋಘಿಮಠ, ಅಮೋಘಸಿದ್ದೇಶ್ವರಮಠದ ಸರ್ವ ಶ್ರೀಗಳು ವೇದಿಕೆಯಲ್ಲಿದ್ದರು. ಅಧ್ಯಕ್ಷತೆಯನ್ನು ಬಸಣ್ಣ ಬೆಟಗೇರಿ ವಹಿಸಿದ್ದರು. ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಫಕ್ಕೀರಪ್ಪ ಹೆಬಸೂರ, ಶೇಖಣ್ಣ ಕಾಳೆ, ಆನಂದಸ್ವಾಮಿ ಗಡ್ಡದೇವರಮಠ, ಕಾಂತೇಶ ಈಶ್ವರಪ್ಪ, ವೀರೇಂದ್ರಗೌಡ ಪಾಟೀಲ, ವಿ.ಜಿ. ಪಡಗೇರಿ, ಮಂಜುನಾಥ ಘಂಟಿ, ಹರೀಶ ಲಕ್ಷ್ಮೇಶ್ವರ, ಸುನೀಲ ಮಹಾಂತಶೆಟ್ಟರ, ನಿಂಗಪ್ಪ ಬನ್ನಿ, ಶಿವಾನಂದ ಪೂಜಾರ, ಯಲ್ಲಪ್ಪ ಹೊಳಲಾಪೂರ, ಡಿ.ಕೆ. ಹೊನ್ನಪ್ಪನವರ, ಶಿವಾನಂದ ಬೆಂತೂರ, ಯಲ್ಲಪ್ಪ ಸೂರಣಗಿ, ಜಿ.ಆರ್. ಕೊಪ್ಪದ, ಭಾಗ್ಯಶ್ರೀ ಬಾಬಣ್ಣ ಸೇರಿದಂತೆ ಸಮಿತಿ ಪದಾಧಿಕಾರಿಗಳು, ಅನೇಕ ಮುಖಂಡರು ವೇದಿಕೆಯಲ್ಲಿದ್ದರು.

# ಎರಡು ದಿನಗಳ ಕೆಡೆನ್ಸ್ ತಂತ್ರಾಂಶದ ಕಾರ್ಯಾಗಾರ

■ವಿಜಯಸಾಕ್ಷಿ ಸುದ್ದಿ, ಗದಗ

ತೋಂಟದಾರ್ಯ ತಾಂತ್ರಿಕ ಮಹಾವಿದ್ಯಾಲಯದ ಇ&ಸಿ (ವಿದ್ಯುನ್ಮಾನ) ವಿಭಾಗ ಮತ್ತು ಹುಬ್ಬಳ್ಳಿಯ ಏಕಲಕ್ಷ್ಯ ಇನೊವೇಶನ್ ಲ್ಯಾಬ್ ಇವುಗಳ ಸಹಯೋಗದಲ್ಲಿ ಕೆಡೆನ್ಸ್ ತಂತ್ರಾಂಶ ಬಳಸಿ ವಿಎಲ್‌ಎಸ್‌ಆಯ್ ವಿನ್ಯಾಸ ಮಾಡುವ ಎರಡು ದಿನಗಳ ಕಾರ್ಯಾಗಾರವನ್ನು ಕೊನೆಯ ವರ್ಷದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು.

ವಿಭಾಗದ ಮುಖ್ಯಸ್ಥರಾದ ಡಾ. ಮಧುಸೂದನ ಕುಲಕರ್ಣಿ ಕಾರ್ಯಕ್ರಮ ಉದ್ಘಾಟಿಸಿದರು. ವಿಎಲ್‌ಎಸ್‌ಐ ಡಿಜೈನ್, ಕೆಡೆನ್ಸ್ ತಂತ್ರಾಶದ ಪರಿಚಯ, ಸ್ಕಿಮೆಟಿಕ್ ಡಿಜೈನ್ ಮತ್ತು ಸಿಮ್ಯುಲೇಶನ್‌ಗಳ ಕುರಿತು ತರಬೇತಿ ನೀಡಲಾಯಿತು. ಎರಡನೆಯ ದಿನ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಅನ್ವಯಿಸುವ ವಿನ್ಯಾಸದ ಸವಾಲುಗಳನ್ನು ಕುರಿತು, ಲೇಔಟ್ ಡಿಸೈನ್ಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಂ.ಎಂ. ಅವಟಿ ಮಾತನಾಡಿ, ವಿಎಲ್‌ಎಸ್‌ಐ ಇಂದು ಬಹು ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ. ನಮ್ಮ ಮಹಾವಿದ್ಯಾಲಯದಲ್ಲಿ ಕೆಡೆನ್ಸ್ ತಂತ್ರಾಂಶ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡುತ್ತಿದ್ದು, ಇದಕ್ಕಾಗಿ 7–8 ಲಕ್ಷ ರೂ.ಗಳನ್ನು ವ್ಯಯಿಸಲಾಗಿದೆ ಎಂದರು. ಆನ್‌ಲೈನ್ ಮೂಲಕ ಚಂಬಮ್ಮ ಕೋಟಿ ಮತ್ತು ಮೋನಿಕಾ ಅವರು ತಿಳಿಸಿಕೊಟ್ಟರೆ, ಆಫ್‌ಲೈನ್ ಮೂಲಕ ಅಭಿಷೇಕ, ಅನ್ನಪೂರ್ಣ, ಜೇನ್ಸಿ ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಇ&ಸಿ ವಿಭಾಗದ ಎಲ್ಲ ಉಪನ್ಯಾಸಕ ವರ್ಗದವರು ಭಾಗವಹಿಸಿದ್ದರು. ಕಾರ್ಯಕ್ರಮದ ಸಂಚಾಲಕರಾದ ಪ್ರೊ. ನೀತಾ ಮುದರಡ್ಡಿ ವಂದಿಸಿದರು.



# ಬರಗಾಲ ನಿರ್ವಹಣೆಗೆ ಸಮರ್ಪಕ ಮುಂಜಾಗ್ರತಾ ಕ್ರಮ

▶▶ಮೊದಲನೇ ಪುಟದಿಂದ

ನರೇಗಾ ಯೋಜನೆಯ ಅನುದಾನ ಗ್ರಾ.ಪಂ.ಗಳಿಗೆ ಸರಳವಾಗಿ ಸಿಗುವಂತೆ ಮಾಡಬೇಕು ಜಿಲ್ಲೆಯಲ್ಲಿ ಕುಡಿಯುವ ನೀರಿನ ತೆ-ೂಂದರೆಯಾಗದಂತೆ ಮುಂಜಾಗೃತೆ ವಹಿಸಲಾಗಿದೆ. ದನ-ಕರುಗಳಿಗೆ ಅಗತ್ಯವಿರುವ ಮೇವು ಮುಂದಿನ ಎರಡು ತಿಂಗಳಿಗೆ ಆಗುವಷ್ಟು ಜಿಲ್ಲೆಯಲ್ಲಿ ದಾಸ್ತಾನು ಇದೆ. ಎಲ್ಲರ ಸಹಕಾರದಲ್ಲಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸೋಣ ಎಂದು ಸಚಿವರು ಹೇಳಿದರು.

ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಮಾತನಾಡಿ, ಜಿಲ್ಲೆಯಲ್ಲಿ ಮುಂಗಾರು ವಿಫಲವಾಗಿದೆ. ಹಿಂಗಾರು ಹಿತಕರವಾಗಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರದ ಯೋಜನೆಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಮತ್ತು ಕೂಲಿ ಕಾರ್ಮಿಕರಿಗೆ, ರೈತರಿಗೆ ಅವರಿದ್ದಲ್ಲಿಯೇ ನರೇಗಾ ಯೋಜನೆಯ ಮೂಲಕ ಉದ್ಯೋಗ ಕಲ್ಪಿಸಬೇಕಾಗಿದೆ ಎಂದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಮಾತನಾಡಿ, ಜಿಲ್ಲೆಯಲ್ಲಿ ಬರನಿರ್ವಹಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇವತ್ತಿನವರೆಗೆ ಕುಡಿಯುವ ನೀರು, ಮೇವು, ಇತರ ಸೌಲಭ್ಯಗಳ ಕೊರತೆ ಕಂಡುಬಂದಿಲ್ಲ. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ವಹಿಸುವುದಾಗಿ ಹೇಳಿದರು.

ಜಿ.ಪಂ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ. ಜಿಲ್ಲೆಯ ಬರಗಾಲ ಪರಿಸ್ಥಿತಿ ಮತ್ತು ಬರಗಾಲ ಪೀಡಿತ ಪ್ರದೇಶಗಳ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಬಸಲಿಂಗಯ್ಯ ಎಸ್. ಮುಗನೂಮಠ ಅವರು ಸ್ವಾಗತಿಸಿ, ನಿರ್ವಹಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರ ಆಪ್ತಕಾರ್ಯದರ್ಶಿ ಪಿ.ಕುಮಾರ, ಉಪವಿಭಾಗಾಧಿಕಾರಿ ಶಾಲಂ ಹುಸೇನ ಸೇರಿದಂತೆ ಶಾಲಾ ಶಿಕ್ಷಣ ಇಲಾಖೆ, ಕೃಷಿ ಇಲಾಖೆ, ಮೀನುಗಾರಿಕೆ, ರೇಷ್ಮೆ, ಅರಣ್ಯ, ಲೋಕೋಪಯೋಗಿ, ಸಣ್ಣ ನೀರಾವರಿ ಇಲಾಖೆ ಮುಂತಾದ ವಿವಿಧ ಇಲಾಖೆಗಳ ಅಧಿಕಾರಿಗಳು ವೇದಿಕೆಯಲ್ಲಿದ್ದರು.

ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ವ್ಯವಸ್ಥೆಯನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಲು ಮತ್ತು ಗ್ರಾ.ಪಂ ಹಂತದ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಪರಿಹರಿಸಲು ಅನುಕೂಲವಾಗುವಂತೆ ಜಿಲ್ಲಾಮಟ್ಟದಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಗ್ರಾ.ಪಂ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪಿಡಿಓಗಳ ಸಭೆ ಜರುಗಿಸುವುದಾಗಿ ಸಚಿವ ಸಂತೋಷ್ ಲಾಡ್ ತಿಳಿಸಿದರು.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದವರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಡಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಿರುದ್ಯೋಗಿ ಯುವಕ/ಯುವತಿಯರಿಗೆ ಎಲೆಕ್ಟ್ರಾನಿಕ್ಸ್ ಮತ್ತು ಡಿಜಿಟಲ್ ಮಾಧ್ಯಮದಲ್ಲಿ ಜಿಲ್ಲಾ/ ತಾಲೂಕು ಮಟ್ಟದಲ್ಲಿ ಉದ್ದಿಮೆಯನ್ನು ಸ್ಥಾಪಿಸಲು ಘಟಕ ವೆಚ್ಚದ ಶೇ 70 ರಷ್ಟು ಅಥವಾ ಗರಿಷ್ಟ ರೂ.5 ಲಕ್ಷಗಳ ಸಹಾಯಧನವನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿದಾರರು ಪರಿಶಿಷ್ಟ ಪಂಗಡದವರಾಗಿರಬೇಕು. ಅರ್ಜಿದಾರರ ಕುಟುಂಬದ ಆದಾಯ ಗ್ರಾಮೀಣ ಪ್ರದೇಶದವರಿಗೆ ರೂ.1.50 ಲಕ್ಷ ಮತ್ತು ನಗರ ಪ್ರದೇಶದವರಿಗೆ ರೂ.2 ಲಕ್ಷಗಳ ಮಿತಿಯಲ್ಲಿರಬೇಕು. ಅರ್ಜಿದಾರರು ಕಳೆದ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅರ್ಜಿದಾರರ ವಯೋಮಿತಿ 21 ರಿಂದ 50 ವರ್ಷದವರೆಗೆ ಇರಬೇಕು.

ಅರ್ಜಿದಾರರ ಕುಟುಂಬದ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯ ನೌಕರರಾಗಿರಬಾರದು. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಆರ್ಥಿಕ ಸೌಲಭ್ಯ ಪಡೆದಿರಬಾರದು.

ಯೋಜನಾ ವರದಿಯೊಂದಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿದಾರರು ಕಡ್ಡಾಯವಾಗಿ ಯುಎಎಂ (ಉದ್ಯೋಗ ಆಧಾರ್ ಮೆಮರಂಡಂ) ನಲ್ಲಿ ನೊಂದಾಯಿತರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಜಿಲ್ಲಾ ಆಡಳಿತ ಭವನ, 1ನೇ ಮಹಡಿ, ದೂ.ಸಂ. 08372-239557 ಸಂಪರ್ಕಿಸಬಹುದಾಗಿದೆ.

# ರಾಜ್ಯಮಟ್ಟದ ಕರಾಟೆಯಲ್ಲಿ ತೃತೀಯ

■ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚೆಗೆ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಬೆಂಗಳೂರು ಹಾಗೂ ವಿಜಯ ವಿಠ್ಠಲ ಪದವಿಪೂರ್ವ ಕಾಲೇಜ್ ಮೈಸೂರು ಇವರ ಸಹಯೋಗದಲ್ಲಿ ಮೈಸೂರಿನಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ(44 ಕೆ.ಜಿ) ಗದುಗಿನ ಸ್ಟುಡೆಂಟ್ ಎಜ್ಯುಕೇಶನ್ ಸೊಸೈಟಿಯ ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಹರ್ಷಿತಾ ಬಾಕಳೆ ತೃತೀಯ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.



ವಿಜೇತ ವಿದ್ಯಾರ್ಥಿನಿಗೆ ಸಂಸ್ಥೆಯ ಚೇರ್ಮನ್ ಪ್ರೊ. ರಾಜೇಶ ಕುಲಕರ್ಣಿ, ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ರೋಹಿತ್ ಒಡೆಯರ್, ಪ್ರೊ. ರಾಹುಲ್ ಒಡೆಯರ್, ಪ್ರೊ. ಸಯ್ಯದ್ ಮತೀನ್ ಮುಲ್ಲಾ, ಆಡಳಿತಾಧಿಕಾರಿ ಎಂ.ಸಿ. ಹಿರೇಮಠ, ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ ಹಾಗೂ ಸಿಬ್ಬಂದಿ ವರ್ಗದವರು ಗೌರವಿಸಿ ಅಭಿನಂದಿಸಿದ್ದಾರೆ.

# ಜಿಲ್ಲಾಧಿಕಾರಿಗಳಿಂದ ಆರೋಗ್ಯ ತಪಾಸಣಾ ವಾಹನಕ್ಕೆ ಚಾಲನೆ




■ ವಿಜಯಸಾಕ್ಷಿ ಸುದ್ದಿ, ಗದಗ

ಕಾರ್ಮಿಕ ಇಲಾಖೆಯ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಆರೋಗ್ಯ ತಪಾಸಣಾ ವಾಹನಕ್ಕೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಶುಕ್ರವಾರದಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಚಾಲನೆ ನೀಡಿದರು.

ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ಉಚಿತ ಆರೋಗ್ಯ ತಪಾಸಣೆ ನಡೆಯಲಿದ್ದು, ಜಿಲ್ಲೆಯಾದ್ಯಂತ 33,500 ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ ತಪಾಸಣೆ ಗುರಿಯಿದ್ದು , ಅರ್ಹರು ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶರಾದ ಕೆ.ಗುರುಪ್ರಸಾದ ಅವರು ಮಾತನಾಡಿ, ಎಲ್ಲ ನೋಂದಾಯಿತ ಕಟ್ಟಡ ಕಾರ್ಮಿಕರು ಹಾಗೂ ಅವರ ಅವಲಂಬಿತರು ಇಲಾಖೆಯ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದರು.

ಜಿಲ್ಲಾ ಕಾರ್ಮಿಕರ ಅಧಿಕಾರಿಗಳಾದ ಬಿ.ಆರ್. ಜಾಧವ ಮಾತನಾಡಿ, ನೋಂದಾಯಿತ ಕಟ್ಟಡ ಕಾರ್ಮಿಕರು ಹಾಗೂ ಅವರ ಅವಲಂಬಿತರು ಲೇಬರ್ ಕಾರ್ಡ್ ಹೊಂದಿರುವ ಅರ್ಹ ಫಲಾನುಭವಿಗಳಿಗೆ ಪ್ರಿವೆಂಟಿವ್ ಹೆಲ್ತ್ ಕೇರ್ ಟ್ರೈನಿಂಗ್ ಮತ್ತು ತಪಾಸಣೆ ನಡೆಸಲಾಗುವುದು. ಫಲಾನುಭವಿಗಳು ಲೇಬರ್ ಕಾರ್ಡ್, ಆಧಾರ್ ಕಾರ್ಡ್ ಹಾಗೂ ರೇಶನ್ ಕಾರ್ಡ್ ಹಾಜರುಪಡಿಸಿ ತಪಾಸಣೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಈ ಶಿಬಿರದಲ್ಲಿ ಅರ್ಹ ನೋಂದಾಯಿತ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ವಿವಿಧ 20 ರೀತಿಯ ಪರೀಕ್ಷೆ ನಡೆಸಲಾಗುವುದು. ತಪಾಸಣೆ ನಂತರ ಕಾರ್ಮಿಕರಿಗೆ ವೈದ್ಯಕೀಯ ವರದಿಗಳನ್ನು ನೀಡಲಾಗುವುದು ಎಂದರು.

ಚಾಲನಾ ಕಾರ್ಯಕ್ರಮದಲ್ಲಿ ಜಿ.ಪಂ. ಯೋಜನಾ ನಿರ್ದೇಶಕರಾದ ಚಳಗೇರಿ, ಕಾರ್ಮಿಕ ನಿರೀಕ್ಷಕರಾದ ಉಮೇಶ್ ಹುಲ್ಲಣ್ಣವರ, ಗಿರೀಶ್ ಬಂಕದಮನಿ, ಯೋಜನಾ ನಿರ್ದೇಶಕ ಸಂದೇಶ ಪಾಟೀಲ, ಕಾರ್ಮಿಕ ಇಲಾಖೆಯ ಸಿಬ್ಬಂದಿಗಳು, ನೋಂದಾಯಿತ ಕಟ್ಟಡ ಕಾರ್ಮಿಕರ ಸಂಘದ ಮುಖಂಡರು, ಬ್ಲಾಸಂ ಆಸ್ಪತ್ರೆಯ ಚಿಕಿತ್ಸಾ ತಂಡದವರು ಹಾಜರಿದ್ದರು.

## ಮನೆ ಬಾಗಿಲಿಗೆ ಜೀವನ ಪ್ರಮಾಣಪತ್ರ

■ ವಿಜಯಸಾಕ್ಷಿ ಸುದ್ದಿ, ಗದಗ

ಅಂಚೆ ಇಲಾಖೆಯು ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್‌ನ ಮೂಲಕ ಪೆನ್ಷನರ್‌ಗಳ ಮನೆ ಬಾಗಿಲಿಗೆ ಜೀವನ ಪ್ರಮಾಣಪತ್ರವನ್ನು ನೀಡುವ ಸೇವೆಯನ್ನು ಮಾಡುತ್ತಿದೆ. ಕೇವಲ 70/- ರೂಗೆ ನಿಮ್ಮ ಸಮೀಪದ ಅಂಚೆ ಕಚೇರಿಯ ಪೋಸ್ಟ್ ಮನ್‌ರು ಈ ಸೇವೆ ನೀಡುತ್ತಾರೆ. ಪೋಸ್ಟ್ ಇನ್ಫೋ ಅಪ್ಲಿಕೇಶನ್ ಮೂಲಕ ಕೋರಿಕೆ ಸಲ್ಲಿಸಿದರೆ ಸಂಬಂಧಿಸಿದ ಪೋಸ್ಟ್ ಮನ್‌ಗಳ ನಿಮ್ಮ ಮನೆ ಬಾಗಿಲಿಗೆ ಬಂದು ಡಿಜಿಟಲ್ ಜೀವನ ಪ್ರಮಾಣಪತ್ರವನ್ನು ನೀಡುತ್ತಾರೆ. ಇದಕ್ಕೆ ಯಾವುದೇ ಹೆಚ್ಚುವರಿ ಶುಲ್ಕ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ಸಮೀಪದ ಅಂಚೆ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಅಂಚೆ ಅಧೀಕ್ಷಕರು ಗದಗ ವಿಭಾಗ ಗದಗ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನರ ದುಡ್ಡು ಜನರ ಜೇಬಿಗೆ ಹಾಕಿದರೆ ಬಿಜೆಪಿಯವರಿಗೆ ಹೊಟ್ಟೆಯುರಿ ಏಕೆ: ಸಿಎಂ ಪ್ರಶ್ನೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಜಾರಿ ಆಗೋದಿಲ್ಲ, ಜಾರಿ ಆದರೆ ರಾಜ್ಯ ಆರ್ಥಿಕ ದಿವಾಳಿ ಆಗುತ್ತದೆ ಎಂದು ಪ್ರಧಾನಿ ಮೋದಿ ಸೇರಿ ಬಿಜೆಪಿ ನಾಯಕರು ಆಡಿಕೊಂಡಿದ್ದರು. ಈಗ ನಾಡು ಶತಕೋಟಿ ಸಂಭ್ರಮ ಆಚರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಸಾರಿಗೆ ಇಲಾಖೆ ಬ್ಯಾಂಕ್ವೆಟ್ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ಶಕ್ತಿ ಯೋಜನೆಯ ಶತಕೋಟಿ ಸಂಭ್ರಮ ಕಾರ್ಯಕಮವನ್ನು ಉದ್ಘಾಟಿಸಿ ಅಪಘಾತ ರಹಿತ ಚಾಲಕರಿಗೆ ಚಿನ್ನದ ಪದಕ ಪ್ರದಾನ ಮಾಡಿ ಮಾತನಾಡಿದರು. ದೇಶದ ಯಾವ ಸರ್ಕಾರಗಳೂ ಹಿಂದೆಂದೂ ಮಾಡದ ಸಾಧನೆಯನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಸಾಧಿಸಿ ತೋರಿಸಿದೆ. ಇದು ಕಣ್ಣ ಮುಂದಿದೆ. ಆದರ ದಾಖಲೆ ಕಣ್ಣ ಮುಂದಿದೆ. ಬಿಜೆಪಿಯವರು ನಿರ್ಲಜ್ಜವಾಗಿ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು ಎಂದರು.

ಜೂನ್ 11 ಕ್ಕೆ ಶಕ್ತಿ ಯೋಜನೆ ಜಾರಿ ಆಯಿತು. ನವೆಂಬರ್ 23 ಕ್ಕೆ 100 ಕೋಟಿ 47 ಲಕ್ಷ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ದಾಖಲೆಗಳು ಕಣ್ಣ ಮುಂದಿವೆ. ಆದರೂ ಈ ಬಿಜೆಪಿ ನಾಯಕರು ಯಾಕಿಷ್ಟು ಸುಳ್ಳು ಹೇಳುತ್ತಾರೆ ಎಂದು ಪ್ರಶ್ನಿಸಿದರು.

## ನೀರು ಪೂರೈಕೆ ಮಾಹಿತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ನವೆಂಬರ್ 25 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 22 ದೊಡ್ಡ ಮಸೂತಿ ಭಾಗ, ಗಿರಣಿ ಲೈನ್, ಈಶ್ವರ ಗುಡಿ ಲೈನ್, ಧಾರವಾಡದವರ ಲೈನ್, ಡಖನಿಯವರ ಲೈನ್, ಗಂಗಿಮಡಿ ಭಾಗ -1 ರಿಂದ 5 ರ ವರೆಗೆ ಕೆಲವು ಉಳಿದ ಭಾಗಗಳು. ವಾರ್ಡ್ ನಂ. 34, 35 ಸಿದ್ದು ಪಾಟೀಲರ ಲೈನ್, ದೊಡ್ಡಮನಿಯವರ ಲೈನ್, ಆದರ್ಶ ನಗರ, ಈ ಡಬ್ಲ್ಯೂ ಎಸ್ 1ನೇ ಕ್ರಾಸ್, ಡಿಪೋ ಹಿಂದಿನ ಭಾಗ, ಕುಮಾರೇಶ್ವರ ಪಾಠಶಾಲೆ, ಬಸವೇಶ್ವರ ಸ್ಕೂಲ್ ಲೈನ್, ಸಿದ್ದಲಿಂಗ ನಗರ, ಗಾರ್ಡನ್ ಲೈನ್, ಮಸೂತಿ ಲೈನ್, ವಾರ್ಡ್ ನಂ. 16, 17, 18,19,25 ಹಾವನೂರ ಸಂಧಿ ದುರ್ಗಮ್ಮ ಗುಡಿ ಭಾಗ-1, 2 ಮಣ್ಣಮ್ಮನವರ ಲೈನ್, ಪಿ ಅಂಡ್ ಟಿ ರೋಡ್, ಮಜ್ಜಗಿ ಓಣಿ, ಕೊನೇರಿ ಹೊಂಡ, ಚವ್ಹಾನದವರ್ ಲೈನ್, ಮೀನದ ಮಾರ್ಕೆಟ್, ಬಳಿಗಾರ ಲೈನ್, ನಮಾಜಿಯವರ ಲೈನ್. ಮುಳಗುಂದ ನಾಕಾದಲ್ಲಿ ಡಿ.ಆಯ್.ಲೈನ್ ದುರಸ್ತಿಗೊಳಿಸುವ ಕಾಮಗಾರಿ ಕೈಗೊಂಡಿದ್ದು, ಕಾರಣ ಅವಳಿನಗರದ ಬೆಟಗೇರಿ ಭಾಗಕ್ಕೆ ನೀರು ಸರಬರಾಜುವಿನಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮವನ್ನು ನವೆಂಬರ್ 26 ರಂದು ರವಿವಾರ ಬೆಳಿಗ್ಗೆ 6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಶ್ರೀಮತಿ ಪೂಜಾ ಹಿರೇಮಠ ಅವರಿಂದ ಸುಗಮ ಸಂಗೀತ, ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ದಾದಾಸಾಬ ಅಣಜಾನವರ ಇವರಿಂದ ವಚನ ಗಾಯನ, ಸಾಯಂಕಾಲ 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಜಗನ್ನಾಥಸಾ ಕಲಬುರ್ಗಿ ಇವರಿಂದ ತತ್ವಪದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಪ್ರತಿಭೆ ಗುರುತಿಸಲು 'ಬಾಲಮೇಳ' ಸಹಕಾರಿ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಕ್ಕಳಲ್ಲಿರುವ ಪ್ರತಿಭೆ ಹೊರತರಲು ಬಾಲಮೇಳದಂತಹ ಕಾರ್ಯಕ್ರಮಗಳು ಸಹಕಾರಿ. ಪ್ರತಿಭೆ ಪ್ರದರ್ಶನಕ್ಕೆ ಇದೊಂದು ಸೂಕ್ತ ವೇದಿಕೆ ಎಂದು ನರೇಗಲ್ಲ ಅಂಗನವಾಡಿ ವಲಯ ಮೇಲ್ವಿಚಾರಕಿ ರಾಧಿಕಾ ಪವಾರ್ ಅಭಿಪ್ರಾಯಪಟ್ಟರು.

ಅವರು ಸಮೀಪದ ಜಕ್ಕಲಿ ಗ್ರಾಮದ ಅಂಗನವಾಡಿ ಕೇಂದ್ರ 117ರಲ್ಲಿ ಈಚೆಗೆ ನಡೆದ ಜವಾಹರಲಾಲ್ ನೆಹರೂರವರ ಜನ್ಮದಿನದ ನೆನಪಿಗಾಗಿ ಆಚರಿಸಿದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಣ್ಣಿನ ಮುದ್ದೆಯಂತಿರುವ ಮಕ್ಕಳನ್ನು ಅಂಗನವಾಡಿಯಲ್ಲಿ ಶಾಲಾ ಪೂರ್ವ ಶಿಕ್ಷಣದ ಮೂಲಕ ಸೇರಿಸುವುದರಿಂದ ಅವರ ಮುಂದಿನ ಭವಿಷ್ಯ ರೂಪುಗೊಳ್ಳುತ್ತದೆ ಎಂದರು.

ಗ್ರಾ.ಪಂ ಅಧ್ಯಕ್ಷೆ ಗಂಗಮ್ಮ ಜಂಗಣ್ಣವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳ ಮನೋವಿಕಾಸಕ್ಕಾಗಿ ಇಂತಹ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸಂತೋಷದಾಯಕ ವಿಚಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವೇಷಭೂಷಣ, ನೃತ್ಯ ಪ್ರದರ್ಶನದಲ್ಲಿ ಭಾಗವಹಿಸಿದ್ದ 25ಕ್ಕೂ ಹೆಚ್ಚು ಮಕ್ಕಳಿಗೆ ಪ್ರಶಸ್ತಿ ವಿತರಿಸಿ ಪ್ರೋತ್ಸಾಹಿಸಲಾಯಿತು. ಬಾಲವಿಕಾಸ ಸಮಿತಿಯ ಅಧ್ಯಕ್ಷೆ ಅನ್ನಪೂರ್ಣ ಸೋಮನಕಟ್ಟಿ ಅಧ್ಯಕ್ಷತೆಯನ್ನು ವಹಿಸಿದ್ದರು, ಗ್ರಾ.ಪಂ ಸದಸ್ಯ ಗುರಪ್ಪ ರೋಣದ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಬಸವರಾಜ ಶ್ಯಾಶೆಟ್ಟಿ, ಕಳಕಪ್ಪ ಸೊಟಬಸಪ್ಪನವರ, ಗೌರಮ್ಮ ಮೆಣಸಗಿ, ಶಂಕರಮ್ಮ ಗಾಣಿಗೇರ, ಖಾದಿರಬೇಗಂ ಬಾಲೇಸಾಬನವರ, ಹುಸೇನಸಾಬ ಬಸಾಪುರ, ನರೇಗಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಂರಕ್ಷಣಾಧಿಕಾರಿ ಎಸ್.ವಿ. ಹಿರೇವಡೆಯರ, ಸಂತೋಷ ರಾಠೋಡ್, ಆಯುಷ್ ವೈದ್ಯಾಧಿಕಾರಿ ಜುಬೇದ ರೋಣದ, ಸುನೀಲ್ ಆದಿ, ಅಂಗನವಾಡಿ ಕಾರ್ಯಕರ್ತೆಯರಾದ ಗಂಗಮ್ಮ ಮಾಸ್ತಿ, ಬಸಮ್ಮ ರಡ್ಡೇರ, ಸಹಾಯಕಿ ಸುನಂದಾ ಪತ್ತಾರ ಸೇರಿದಂತೆ ಮಕ್ಕಳ ಪಾಲಕ-ಪೋಷಕರು ಉಪಸ್ಥಿತರಿದ್ದರು.

ವಿಶ್ವನಾಥ ಬುಳ್ಳಾ ಸ್ವಾಗತಿಸಿದರು. ಅಂಗನವಾಡಿ ಕೇಂದ್ರದ ಶಿಕ್ಷಕಿ ಗಂಗಮ್ಮ ಪಾಟೀಲ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

### ಚೈತನ್ಯ ಕ್ರೀಡಾ ಸಂಸ್ಥೆಯಿಂದ ರಾಜ್ಯ ತಂಡದ ಅಟ್ಯಾಪಟ್ಯಾ ಕ್ರೀಡಾಪಟುಗಳಿಗೆ ತರಬೇತಿ ಕಾರ್ಯಾಗಾರ

# ವಿಜಯದ ಮಾಲೆ ಒಲಿದು ಬರಲಿ...

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನ.26ರಿಂದ ತಮಿಳುನಾಡಿನ ಚೆನ್ನೈನಲ್ಲಿ ನಡೆಯಲಿರುವ 32ನೇ ರಾಷ್ಟ್ರೀಯ ಮಹಿಳಾ ಸೀನಿಯರ್ ಅಟ್ಯಾಪಟ್ಯಾ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲಿರುವ ಕರ್ನಾಟಕ ತಂಡದ 15 ಜನ ಮಹಿಳಾ ಕ್ರೀಡಾಪಟುಗಳಿಗೆ ನರೇಗಲ್ಲಿನ ಚೈತನ್ಯ ಕ್ರೀಡಾ ಸಂಸ್ಥೆಯ ಅಡಿಯಲ್ಲಿ ಅನ್ನದಾನೇಶ್ವರ ಪ.ಪೂ ಮಹಾವಿದ್ಯಾಲಯದ ಕ್ರೀಡಾ ಮೈದಾನದಲ್ಲಿ ನ.14ರಿಂದ ತರಬೇತಿ ಕಾರ್ಯಾಗಾರ ನಡೆಯುತ್ತಿದೆ.

ಗ್ರಾಮೀಣ ಮಕ್ಕಳ ಕ್ರೀಡಾ ಪ್ರತಿಭೆಯನ್ನು ನಾಡಿಗೆ ಪರಿಚಯಿಸುವ ಮಹತ್ವಾಕಾಂಕ್ಷೆ ಹೊತ್ತು ನರೇಗಲ್ಲದಲ್ಲಿ ಅಸ್ತಿತ್ವಕ್ಕೆ ಬಂದಿರುವ ಚೈತನ್ಯ ಕ್ರೀಡಾ ಸಂಸ್ಥೆ ಈಗಾಗಲೇ ಹಲವಾರು ಕ್ರೀಡಾಪಟುಗಳನ್ನು ವಿವಿಧ ಕ್ರೀಡೆಗಳಲ್ಲಿ ತರಬೇತುಗೊಳಿಸಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಅವರ ಪ್ರತಿಭೆಯನ್ನು ಪರಿಚಯಿಸಿದ್ದು, ಈಗ ಕರ್ನಾಟಕ ತಂಡದ ಅಟ್ಯಾಪಟ್ಯಾ ಕ್ರೀಡಾಪಟುಗಳಿಗೆ ತರಬೇತಿ ನೀಡುತ್ತಿದೆ.



ಗ್ರಾಮೀಣ ಕ್ರೀಡೆಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯತೆ ದೊರೆಯುತ್ತಿರುವುದು ಆ ಕ್ರೀಡಾಪಟುಗಳಲ್ಲಿನ ಕ್ರೀಡಾ ಸಾಧನೆಯಿಂದ ಎಂಬುದು ಸತ್ಯ. ಈ ನಿಟ್ಟಿನಲ್ಲಿ ನರೇಗಲ್ಲಿನ ಚೈತನ್ಯ ಕ್ರೀಡಾ ಸಂಸ್ಥೆಯ ಅಡಿಯಲ್ಲಿ 15 ಜನ ಮಹಿಳಾ ಕ್ರೀಡಾಪಟುಗಳಿಗೆ ನಿತ್ಯ 7 ಗಂಟೆಗಳ ಕಾಲ ತರಬೇತಿ ನಡೆಯುತ್ತಿದ್ದು, ದೈಹಿಕ ಸದೃಢತೆಗೆ ಹೆಚ್ಚು ಒತ್ತು ನೀಡಲೆಂದು ತರಬೇತುದಾರ ಮಹಮ್ಮದರಫಿಕ ರೇವಡಿಗಾರ ತರಬೇತಿ ನೀಡುತ್ತಿದ್ದರೆ, ಅಟ್ಯಾಪಟ್ಯಾ ಸಂಪನ್ಮೂಲ ವ್ಯಕ್ತಿ, ಶಿಕ್ಷಕ ವಿ.ಎ. ಕುಂಬಾರ ಹಾಗೂ ದೈಹಿಕ ಶಿಕ್ಷಕ ಆರ್.ಎಸ್. ನರೇಗಲ್ಲ ತಮ್ಮ ಶಾಲಾ ಅವಧಿಯ ನಂತರ ತರಬೇತಿ ಕಾರ್ಯಾಗಾರದಲ್ಲಿ ಭಾಗಿಯಾಗುತ್ತಿದ್ದಾರೆ.

ಕ್ರೀಡಾಪಟುಗಳಿಗೆ ನಿತ್ಯ ಮುಂಜಾನೆ 5.30ರಿಂದ 9ರವರೆಗೆ ಹಾಗೂ ಸಂಜೆ 3.30ರಿಂದ 7ರವರೆಗೆ ವಿಶಿಷ್ಟ ಕೌಶಲ್ಯಗಳನ್ನು ಕಲಿಸಿಕೊಡುತ್ತಿದ್ದು, ಕ್ರೀಡಾಪಟುಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವ್ಯಕ್ತಿತ್ವ ವಿಕಸನದ ತರಬೇತಿ ಕೂಡಾ ನಡೆಯುತ್ತಿವೆ. ವಿವಿಧ ಗಣ್ಯಮಾನ್ಯರು ಕಾರ್ಯಾಗಾರಕ್ಕೆ ಭೇಟಿ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಎಸ್‌ಎವಿವಿಪಿ ಸಮಿತಿ ಆಡಳಿತಾಧಿಕಾರಿ ಎನ್. ಆರ್. ಗೌಡರ, ಪ್ರಾಚಾರ್ಯ ವೈ.ಸಿ. ಪಾಟೀಲ, ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಆರ್.ಎಸ್. ನರೇಗಲ್ಲ, ವಿಡಿಎಸ್‌ಟಿ ಪ್ರಾಚಾರ್ಯ ಎಂ.ಸಿ. ಕಟ್ಟಿಮನಿ ಸೇರಿದಂತೆ ಶಾಲಾ-ಕಾಲೇಜುಗಳ ಮುಖ್ಯಸ್ಥರು ಭೇಟಿ ನೀಡಿ, ಮಕ್ಕಳ ಕ್ರೀಡಾ ಕೌಶಲ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಶಿಕ್ಷಕ ವಿ.ಎ. ಕುಂಬಾರ ದೈಹಿಕ ಶಿಕ್ಷಕ ಕೆ.ಸಿ. ಜೋಗಿ, ಮಹಮ್ಮದರಫೀಕ ರೇವಡಿಗಾರ, ಬಸವರಾಜ ಸಿದ್ನೇಕೊಪ್ಪ ಮುಂತಾದವರು ನರೇಗಲ್ಲ ಹಾಗೂ ಸುತ್ತಮುತ್ತಲ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಮೂಲಕ ಇಲ್ಲಿ ಅಟ್ಯಾಪಟ್ಯಾ ಕ್ರೀಡೆಗೆ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ.

ತರಬೇತಿಯಲ್ಲಿ ಕ್ರೀಡಾಪಟುಗಳಿಗೆ ಸೂಕ್ತ ಸೌಲಭ್ಯ ಕಲ್ಪಿಸಿದ ಚೈತನ್ಯ ಸಂಸ್ಥೆಗೆ, ತರಬೇತುದಾರರು ಅಭಿನಂದನಾರ್ಹರು. ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ರಾಜ್ಯದ ಕ್ರೀಡಾಪಟುಗಳು ಜಯಶಾಲಿಯಾಗಿ ಹೊರಹೊಮ್ಮಲಿ ಎಂದು ರಾಜ್ಯ ಅಟ್ಯಾಪಟ್ಯಾ ಅಸೋಸಿಯೇಷನ್ ಪ್ರಭಾರಿ ಕಾರ್ಯದರ್ಶಿ ಎಲ್.ಸಿ. ಲಮಾಣಿ ಹಾಗೂ ಶಿಕ್ಷಕ ಕೆ.ಟಿ. ನಡುಮನಿ ಆಶಯ ವ್ಯಕ್ತಪಡಿಸಿದರು.

> ಅಟ್ಯಾಪಟ್ಯಾ ತರಬೇತಿ ಶಿಬಿರ ಹಮ್ಮಿಕೊಳ್ಳಲು ಬೆಂಗಾವಲಾಗಿ ನಿಂತ ರಾಜ್ಯ ಅಟ್ಯಾಪಟ್ಯಾ ತರಬೇತುದಾರರಾದ ಎಲ್.ಸಿ. ಲಮಾಣಿ, ಕೆ.ಟಿ. ನಡುಮನಿ, ನಿರಂತರ ತರಬೇತಿ ನೀಡುತ್ತಿರುವ ದೈಹಿಕ ಶಿಕ್ಷಕ ಮಹಮ್ಮದ ರಫೀಕ ರೇವಡಿಗಾರರವರ ಕಾರ್ಯ ಎಂದೆಂದೂ ಸ್ಮರಣೀಯ. ಮಾರ್ಗದರ್ಶನ ನೀಡುತ್ತಿರುವ ವಿ.ಎ. ಕುಂಬಾರ, ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಆರ್.ಎಸ್. ನರೇಗಲ್ಲ ಬೆಂಬಲವಾಗಿದ್ದಾರೆ. ಈ ಭಾಗದ ಕ್ರೀಡೆಗಳು ಮುಂಚೂಣಿಗೆ ಬರಬೇಕೆಂಬುದೇ ನಮ್ಮ ಹೆಬ್ಬಯಕೆ.
>
> **– ಎನ್.ಕೆ. ಬೇವಿನಕಟ್ಟಿ.**
> ಚೈತನ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ.

> ನಮಗೆ ಇಲ್ಲಿಯ ತರಬೇತಿ ಹುರುಪು ನೀಡಿದೆ. ಪ್ರಾರಂಭದಲ್ಲಿ ಕಠಿಣವೆನಿಸಿದರೂ ದಿನಗಳೆದಂತೆ ಕ್ರೀಡಾ ಕೌಶಲ್ಯಗಳನ್ನು ಕಲಿತಿದ್ದೇವೆ. ತರಬೇತಿಗೆ ಬಂದಂದಿನಿಂದ ನಮ್ಮಲ್ಲಿ ಆತ್ಮ ವಿಶ್ವಾಸ ಇಮ್ಮಡಿಗೊಂಡಿದೆ. ಚೈತನ್ಯ ಕ್ರೀಡಾ ಸಂಸ್ಥೆ ನಮಗೆ ಒದಗಿಸಿರುವ ಸೌಲಭ್ಯಗಳು ತೃಪ್ತಿ ತಂದಿವೆ. ತರಬೇತುದಾರರು ಹಾಗೂ ಸಂಸ್ಥೆ ನಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ನಾವು ಖಂಡಿತ ರಾಷ್ಟ್ರಮಟ್ಟದಲ್ಲಿ ಗೆಲ್ಲುತ್ತೇವೆ ಎಂದು ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳಾದ ಮಹೇಶ್ವರಿ ಹನಮಂತಗೌಡ್ರ, ಭೀಮಮ್ಮ ಪೂಜಾರ ಹಾಗೂ ವೈಶಾಲಿ ಅಭಿಪ್ರಾಯ ವ್ಯಕ್ತಪಡಿಸಿದರು.

# ಇಂದು ಪ್ರೌಢಶಾಲಾ ವಿದ್ಯಾರ್ಥಿಗಳ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಗದಗ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಹಯೋಗದೊಂದಿಗೆ 2023ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ ಹಾಗೂ ಬಹುಮಾನ ವಿತರಣಾ ಸಮಾರಂಭವನ್ನು ನವೆಂಬರ್ 25 ರ ಶನಿವಾರದಂದು ಮದ್ಯಾಹ್ನ 3 ಘಂಟೆಗೆ ಜಿಲ್ಲಾಡಳಿತ ಭವನದ ಮುಖ್ಯಸಭಾಂಗಣದಲ್ಲಿ ನಡೆಯಲಿದೆ.

ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಗೌರವ ಉಪಸ್ಥಿತಿ ವಹಿಸುವರು.

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.



ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಶಾಲಾ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಿತೇಶ ಕುಮಾರ್ ಸಿಂಗ್, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಜಿ. ಶ್ರೀಧರ್, ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶ್ರೀಮತಿ ಸಿ. ಶಿಖಾ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀಮತಿ ಬಿ.ಬಿ.ಕಾವೇರಿ, ಜಿಲ್ಲಾಧಿಕಾರಿ ಶ್ರೀಮತಿ ವೈಶಾಲಿ ಎಂ.ಎಲ್. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಧಾರವಾಡ ಅಪರ ಆಯುಕ್ತರಾದ ಶ್ರೀಮತಿ ಜಯಶ್ರೀ ಶಿಂತ್ರಿ ಆಗಮಿಸಲಿದ್ದಾರೆ.

ಯುವ ಸಂಸತ್ ಸ್ಪರ್ಧೆಗೆ ರಾಜ್ಯದ ಎಲ್ಲ ಜಿಲ್ಲೆಗಳಿಂದ ಎರಡು ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿ ಒಟ್ಟು ಎಪ್ಪತ್ತು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಸಂಸತ್ ಕಲಾಪದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳು ಸ್ಪರ್ಧೆಯ ರೂಪದಲ್ಲಿ ಜಿಲ್ಲಾಡಳಿತ ಭವನದಲ್ಲಿ ನಡೆಯಲಿವೆ.

ಕಾರ್ಯಕ್ರಮಕ್ಕೆ ಸರ್ವರನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿದೇಶಕ ಎಂ.ಎ. ರಡ್ಡೇರ(ಆಡಳಿತ) ಹಾಗೂ ಜಿ.ಎಲ್.ಬಾರಾಟಕ್ಕೆ (ಅಭಿವೃದ್ಧಿ) ಸ್ವಾಗತಿಸಿದ್ದಾರೆ.

# ಮುದ್ರಣೋದ್ಯಮಕ್ಕೆ ಗದುಗಿನ ಕೊಡುಗೆ ಅನನ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಮುದ್ರಣ ಉದ್ಯಮಕ್ಕೆ ಗದಗ ತನ್ನದೇ ಆದ ವಿಶಿಷ್ಠ ಕೊಡುಗೆ ನೀಡಿದೆ. ಮುದ್ರಣ ಮತ್ತು ಪ್ರಕಾಶನ ಕ್ಷೇತ್ರದಲ್ಲಿ ಹೆಸರು ಮಾಡಿರುವ ಗದಗ ಅಚ್ಚುಮೊಳೆಯಿಂದ ಆರಂಭಗೊಂಡು ಅತ್ಯಾಧುನಿಕ ಆಫ್‌ಸೆಟ್ ಮುದ್ರಣದಲ್ಲೂ ಮುಂಚೂಣಿಯಲ್ಲಿದೆ. ಪಠ್ಯ-ಪುಸ್ತಕ, ಸಾಹಿತ್ಯ ಪುಸ್ತಕ ಸೇರಿದಂತೆ ಕ್ಯಾಲೆಂಡರ್ ಪ್ರಕಟಣೆಯಲ್ಲಿ ರಾಜ್ಯದ ಗಮನ ಸೆಳೆದಿದೆ ಎಂದು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಈಶಣ್ಣ ಮುನವಳ್ಳಿ ಅಭಿಪ್ರಾಯಪಟ್ಟರು.

ಅವರು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ ಗದುಗಿನ ಬಸವರಾಜ ಅಯ್ಯಪ್ಪ ಅಂಗಡಿ ಟ್ರಸ್ಟ್ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.




ಗದುಗಿನಲ್ಲಿ ಹಲವಾರು ಪ್ರಸಿದ್ಧ ಪ್ರಕಾಶಕರು ಉತ್ತಮ ಕೊಡಗೆ ನೀಡಿದ್ದಾರೆ. ಅಂತಹ ಮಹನೀಯರಲ್ಲಿ ಪ್ರಕಾಶಕರೂ ಆಗಿದ್ದ ಬಸವರಾಜ ಅವರು ಮಾರುತಿ ಬುಕ್ ಸೆಂಟರ್ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದವರು ಎಂದರು.

ಕಾರ್ಯದರ್ಶಿ ಪ್ರಕಾಶ ಉಗಲಾಟದ ಮಾತನಾಡಿ, ತಮ್ಮ ಅಧಿಕಾರಾವಧಿಯಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ವ್ಯಾಪಾರಸ್ಥರ ಬೇಡಿಕೆಗಳಿಗೆ ಸ್ಪಂದಿಸುವದಾಗಿ ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಹಿತಿ ಅಂದಾನೆಪ್ಪ ವಿಭೂತಿ ಸಂದರ್ಭೋಚಿತವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಬಸವರಾಜ ಅಯ್ಯಪ್ಪ ಅಂಗಡಿ ಟ್ರಸ್ಟ್‌ನ ಅಧ್ಯಕ್ಷ ಸುರೇಶ ಅಂಗಡಿ ವಹಿಸಿದ್ದರು.

ಕಾರ್ಯಕ್ರಮದಲ್ಲಿ ವಿಶ್ವನಾಥ ರಾಮನಕೊಪ್ಪ, ಜಯದೇವ ಮೆಣಸಗಿ, ಚನ್ನಬಸಪ್ಪ ಅಕ್ಕಿ, ವಿಜಯಕುಮಾರ ಹಿರೇಮಠ, ಮಹಾಲಿಂಗಪ್ಪ ರಂಜಣಗಿ, ಪ್ರಸಾದ ಹಿರೇಮಠ, ಪರಶುರಾಮ ತೆರದಾಳ, ಸಿದ್ಧಲಿಂಗೇಶ ಅಂಗಡಿ, ವಿನಯ ಕಾಡಪ್ಪನವರ, ಉಮೇಶ ಭೂಸ್ತ, ಜವಾಹರ ಖೋಡೆ, ಧನ್ನೂರಹಿರೇಮಠ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka